ಅಪರಂಜಿ


ಜೂನ್
1991
ತಿಳಿನಗೆಯ ಕಾರಂಜಿ



ಪ್ರಕಾಶ್
ನಾಗೂಶ್ರೀ ಸೂರಿ
ಶಾಂತಾ ರಘು
ಶಿವು
ಕಮಲಾ ರಾಮಸ್ವಾಮಿ
ಎಚ್. ಡುಂಡಿರಾಜ್
ಲೀಲಾ ಮಿರ್ಲೆ
ಶೀಥ
ಸಿ. ಆರ್. ಸತ್ಯ


ಬಿಡಿ ಪ್ರತಿ: 2 ರೂ. 50 ಪೈ.

ಶುಭಾಶಯಗಳೊಂದಿಗೆ



ಎಸ್. ವಿ. ಆರ್. ಏಜೆನ್ಸೀಸ್

ಬೆಂಗಳೂರು





ಸಂಪುಟ ೮ ಜೂನ್ ೧೯೯೧ ಸಂಚಿಕೆ ೯

ರಾಜೀವ್ ಗಾಂಧಿ

ವಿಮಾನ ಚಾಲಕನಾಗಿ, ಶ್ರೀಸಾಮಾನ್ಯನಂತೆ, ಹೆಂಡತಿ ಮಕ್ಕಳೊಡನೆ ಸುಖವಾಗಿ ಸಂಸಾರ ಮಾಡಿಕೊಂಡಿರುವ ಅವಕಾಶವನ್ನು ಗಾಳಿಗೆ ತೂರಿ, ಶ್ರೀರಂಗದ ಒನಕೆಯಂತಿರುವ ಈ ದೇಶದ ಪ್ರಧಾನಿ ಪಟ್ಟವನ್ನು ಒಪ್ಪಿದ್ದು, ಎಷ್ಟರ ಮಟ್ಟಿಗೆ, ಸ್ವಂತ ಮಹತ್ವಕಾಂಕ್ಷೆ, ಎಷ್ಟರ ಮಟ್ಟಿಗೆ ತಾಯಿಯ ದಾಕ್ಷಿಣ್ಯವೆಂದು ರಾಜೀವ್ ಪರಿಗಣಿಸಿದ್ದರು ಎಂಬುದು ಈಗ ಅಗೋಚರ. ಅದು ಹೇಗಾದರೂ ಇರಲಿ, ಪ್ರಧಾನಿ ಪಟ್ಟವನ್ನು ತ್ಯಜಿಸಿದ ನಂತರ, ರಾಜೀವ್, ತಮ್ಮ ಕೊನೆಯುಸಿರಿನ ವರೆಗೂ ಪ್ರಜಾಪ್ರಭುತ್ವದ ಕಟ್ಟುಪಾಡುಗಳನ್ನು ಅನುಸರಿಸಿ ನಡೆದಿದ್ದರೆಂಬುದು ನಿರ್ವಿವಾದ.

ಸಾಂಪ್ರದಾಯಿಕತೆಯ ಕಗ್ಗತ್ತಲಲ್ಲಿ ದೇಶದ ಅನೇಕ ಭಾಗಗಳು ಇನ್ನೂ ಮುಳುಗಿರುವಾಗ, ವೈಜ್ಞಾನಿಕ ಮನೋಭಾವದ, ಆಧುನಿಕ ದೃಷ್ಟಿಕೋನವನ್ನು ದೇಶಕ್ಕೆ ನೀಡುವುದರಲ್ಲಿ ರಾಜೀವ್ ಸಫಲರಾಗಿದ್ದರು. ಅಂತಹ ಉತ್ಸಾಹೀ ಚೇತನ ಈಗ ಸ್ತಬ್ಧವಾಗಿದೆ.

ಡೆನ್ಮಾರ್ಕ್ ರಾಜಕುಮಾರ ಅಸುನೀಗಿದಾಗ ಆತನ ಸಖನೊಬ್ಬನು ಹೇಳಿದ ಮಾತುಗಳಲ್ಲಿ ಅಪರಂಜಿ ರಾಜೀವ್‌ಗೆ ತನ್ನ ವಿದಾಯ ಹೇಳುತ್ತಾಳೆ.

"Good Night, Sweet Prince"

ಈ ಸಂಚಿಕೆಯಲ್ಲಿ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು
ದೂರವಾಣಿ ; 342144

ಗೌರವ ಸಲಹೆಗಾರರು ; ಶ್ರೀ ಅ. ರಾ. ಸೇ. ಶ್ರೀ ಶೇಷಗಿರಿ ಸಂಪಾದಕ : **ಶಿವಕುಮಾರ್**	ಚಂದಾ ವಿವರ : ಬಿಡಿ ಪ್ರತಿ : 2 ರೂ. 50 ಪೈ. ವಾರ್ಷಿಕ ಚಂದಾ : 25 ರೂ. ಆಜೀವ ಚಂದಾ : 2-50 ರೂ.	ವಿಳಾಸ : ಅಪರಂಜಿ ಕಾರ್ಯಾಲಯ 36, 6ನೆಯ ಮುಖ್ಯ ರಸ್ತೆ ಮಲ್ಲೇಶ್ವರಂ ಬೆಂಗಳೂರು 560003 ಕೆಲಸದ ವೇಳೆ : ಬೆಳಗ್ಗೆ 8ರಿಂದ 10 ಗಂಟೆಯ ವರೆಗೆ

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೮ ಜೂನ್ ೧೯೯೧ ಸಂಚಿಕೆ ೯

ಆನಂದಮಯನೆಂಬ ಇನ್ನೊಬ್ಬ ಒಳಗಿನ ಆತ್ಮನಿದ್ದಾನೆ.

—ತೈತ್ತಿರೀಯ

ಆನಂದಮಯ ಆತ್ಮನೆಂದರೆ ಪರಬ್ರಹ್ಮವೇ ಎಂದು ತಪ್ಪಾಗಿ ಭಾವಿಸುವ ಅದ್ವೈತಿಗಳೂ, ಪಂಡಿತಂ ಮನ್ಯರೂ ಹಿಂದೂ ಇದ್ದರು ಇಂದೂ ಇದ್ದಾರೆ.


ಬ್ರಹ್ಮಾನಂದವು ಮನುಷ್ಯರ ಎಲ್ಲಾ ಆನಂದಗಳಿಗೂ ಆಶ್ರಯವಾಗಿದೆ. ಲೌಕಿಕ ಆನಂದಗಳು ತುಚ್ಛವಾದವು, ಅಲ್ಪವಾದವು. ಅಲ್ಲದೆ ಮನಸ್ಸು ಬಯಸಿದ್ದನ್ನು ಪಡೆದಾಗ ಕ್ಷಣಕಾಲ ಲಯವಾಗಿ ಮತ್ತೆ ಜಗತ್ತನ್ನು ಭಾವಿಸುತ್ತದೆ. ಆ ಅಲ್ಪ ಕಾಲ ಕಂಡದ್ದು ಬ್ರಹ್ಮಾನಂದವೇ. ಅದನ್ನು ಬಿಟ್ಟು ಮತ್ತೊಂದಿಲ್ಲ.

ಬ್ರಹ್ಮವು ಇಲ್ಲವೆಂದು ಅರಿತವರು ಇದ್ದರೂ ಇಲ್ಲವಾಗಿ ಬಿಡುತ್ತಾರೆ ಎಂದು ಉಪನಿಷತ್ತು ಹೇಳುತ್ತದೆ.

ಈಗ ಚುನಾವಣಾ ಆಶ್ವಾಸನೆಗಳನ್ನೇ ತೆಗೆದುಕೊಳ್ಳಿ. ಎಷ್ಟು ಭವ್ಯವಾಗಿವೆ. ಅವು ಭವ್ಯವೆಂದು ಚುನಾವಣೆಗೆ ಮೊದಲು ಪರಮಾತ್ಮನನ್ನು ಸೇವಿಸಿದ ನಂತರ ಸ್ವಲ್ಪ ಹೊತ್ತು ಅನಿಸುತ್ತದೆ. ಆರ್ಥಿಕ ದಿವಾಳಿಯನ್ನು ಮರೆಸಲು ಕೈಬೆಚ್ಚಗಾದಾಗ ಖುಷಿತೋರುತ್ತದೆ. ಮತ್ತೆ ದುಃಖದ ಹೊಳೆ ಅವಿರತವಾಗಿ ಹರಿಯುತ್ತದೆ

ಐಕ್ಯತೆಯನ್ನು ಬೋಧಿಸುವವರು ತಮ್ಮ ಪಕ್ಷವನ್ನೇ ಒಡೆಯುತ್ತಾರೆ. ಓಟು ಕೊಡುವರೆಂಬ ಭ್ರಮೆಯಿಂದ ಕೋಮುವಾದಿಗಳ ಬೆಂಬಲ ಕೋರುವವರೇ, ಜಾತ್ಯತೀತತೆ ಬೋಧಿಸುತ್ತಾರೆ. ದೇಶವನ್ನು ಕೊಳ್ಳೆ ಹೊಡೆಯುವವರೇ ಭದ್ರತೆ ಎನ್ನುತ್ತಾರೆ. ಭಾರತೀಯರು ತಮ್ಮ ಧರ್ಮವನ್ನೇ ಕೈಬಿಟ್ಟ ಮೇಲೆ ಸರ್ವಧರ್ಮ ಸಮಭಾವ ಹೇಗೆ ಮೂಡಲು ಸಾಧ್ಯ ?

ಮತದಾರ ದಿಗ್ಭ್ರಮಿತನಾಗಿದ್ದಾನೆ. ಅವನಿಗೆ ಸ್ವರೂಪ ತಿಳಿಯಲಿ.



ಪ್ರಕಾಶ್

ಪಿ. ಯು. ಸಿ. ಪರೀಕ್ಷೆ: ಅಸಂಬದ್ಧ ಪ್ರಶ್ನೆಗಳಿಗೆ ಪೂರ್ಣ ಅಂಕ!

— ಸುದ್ದಿ

ಪ್ರಶ್ನೆ ಕೇಳಿದವರಿಗೆ ಸೊನ್ನೆ ಸುತ್ತಬೇಕು!

*　　　*　　　*

'ರಾಜೇಶ್ ಖನ್ನಾ ಅದ್ವಾನಿ ವಿರುದ್ಧ'

— ಸುದ್ದಿ

ಚಿತ್ರರಂಗ ಅದ್ವಾನವಾಗಿ ಹೋಗಿದೆ!

*　　　*　　　*

ಕಾವೇರಿ : ಪಂಚಾಯ್ತಿ ನಿಲುವು ಒಪ್ಪದ ಸುಪ್ರೀಂ ಕೋರ್ಟ್

— ಪತ್ರಿಕೆ

ಸರಿ, ಪಂಚಾಯ್ತಿ ಮತ್ತೆ ಆರಂಭ!

*　　　*　　　*

ರಾಮಾಯಣದಲ್ಲಿ ರಾವಣನ ಪಾತ್ರ ಮಾಡಿದ ನಟ ಬಿ.ಜೆ.ಪಿಗೆ ಸೇರಿದರಂತೆ

— ಸುದ್ದಿ

ಪಾಪ, ಅವರು ರಾಮಾಯಣ ಓದಿಲ್ಲವೇನೋ?

*　　　*　　　*

'ಚುನಾವಣೆಯಲ್ಲಿ ಈ. ಬಾರಿ ನಾನು ಸ್ಪರ್ಧಿಸದೆ ಇದ್ದುದು ದೊಡ್ಡ ತಪ್ಪು

— ಡಾ|| ಮೋದಿ

ಅವರ 'ದೃಷ್ಟಿ'ಕೋನ ಬದಲಾಗಲೆಂದು ಹಾರೈಸೋಣ!

*　　　　*　　　　*

ತಮಿಳುನಾಡಿನಲ್ಲಿ ಗೂಂಡಾಗಳು ಚುನಾವಣಾ ಕಣಕ್ಕೆ

— ಸುದ್ದಿ

ಇದೇನು ಹೊಸ ಸುದ್ದಿಯೇ, ಬಿಡಿ!

*　　　　*　　　　*

'ಕಳಂಕಿತ ನಾಯಕರು ಇತಿಹಾಸದ ಕಸದ ಬುಟ್ಟಿಗೆ'

— ಶ್ರೀ ಜೋಷಿ

ಕಸದ ಬುಟ್ಟಿ ತುಂಬಿ ತುಳುಕುತ್ತಿದೆಯಲ್ಲ?

*　　　　*　　　　*

ಲಕ್ಷದ್ವೀಪ; ಇಬ್ಬರೇ ಅಭ್ಯರ್ಥಿಗಳು!!

*　　　　*　　　　*

ಪಂಜಾಬ್; ಕೆನರಾ ಬ್ಯಾಂಕಿನಿಂದ ಎರಡು ಲಕ್ಷ ರೂ. ಲೂಟಿ

— ಸುದ್ದಿ

ಎಲೆಕ್ಷನ್ ಖರ್ಚಿಗಿರಬೇಕು!

6

ಟೆಲಿಫೋನೈಟಿಸ್

ನಾಗೂಶ್ರೀ ಸೂರಿ

ಕಮರ್ಷಿಯಲ್ ಡಿಪಾರ್ಟ್‌ಮೆಂಟಿನ ಮ್ಯಾನೇಜರು ಅಂದ ಮೇಲೆ ಒಂದು ಹೊರೆ ಜನ ಸಪ್ಲಯರುಗಳು, ಕಂಟ್ರಾಕ್ಟರುಗಳು, ಕ್ಲಿಯರಿಂಗ್ ಏಜಂಟುಗಳು ಅನ್ನೋವರುಗಳ ಬಾಲಾನ್ನ ತಿರುಚಬೇಕಾಗ್ತಾ ಇರತ್ತೆ. ಆದಕ್ಕೆಲ್ಲಾ ಆಫೀಸಲ್ಲಿರೋ ಫೋನನ್ನೆ ಉಪಯೋಗಿಸೋದು ಅಂದರೆ ಕೆಲಸ ನಡೆಯೊಲ್ಲ. ಮನೆಯಲ್ಲಿ ಒಂದು ಫೋನೂ ಅಂತ ಇದ್ದರೆ ಬಹಳ ಆನುಕೂಲ ಅನ್ನೋ ಉದ್ದೇಶದಿಂದ ಒಂದು ಎಂಟು ತಿಂಗಳ ಕೆಳಗೆ ವಾಮನಮೂರ್ತಿ ಮನೆಗೆ ಟೆಲಿಫೋನ್ ಹಾಕಿಸಿದ್ದರು, ಅವನ ಕಂಪನಿಯವರು.

ಆದರೆ ಅದರಿಂದ ನಿಜವಾದ ಅನುಕೂಲ ಅನ್ನೋದು ಅವನ ಹೆಂಡತಿ ವಾಣೀಗೇನೆ. ಅವಳಿಗೋ ಮಾತಿನ ಚಪಲ, ಜೊತೆಗೆ ಊರ ತುಂಬಾ ಸ್ನೇಹಿತೆಯರು. ಹೀಗಾಗಿ ಗಂಡ ಆ ಕಡೆ ಆಫೀಸಿಗೆ ಹೊರಟ ಅಂದ ಕೂಡಲೆ ಇವಳು ಈ ಕಡೆ ಮನೆಗೆ ಬೀಗ ಹಾಕಿ ಹೊರಟಳು ಅಂದರೆ ಮತ್ತೆ ವಾಪಸು ಬರ್ತಾ ಇದ್ದದ್ದು ಸಂಜೆಗೇನೆ. ಟೆಲಿಫೋನು ಮನೆಗೆ ಬಂತೂ ಅಂದ ಮೇಲೆ ಸದ್ಯ, ಆ ತಾಪತ್ರಯ ಇಲ್ಲದ ಹಾಗಾಯಿತು. ಮನೇಲಿ ಕೂತುಕೊಂಡು ಊರಲ್ಲಿರೋರ ಸುದ್ದೀನೆಲ್ಲ ಜಮಾಯಿಸಬಹುದೂ ಅಂದ ಮೇಲೆ ಅವಳು ಬಿಡತಾಳೆಯೇ ? ಬಳಗಾಗ ಎದ್ದು ಫೋನು ಹಿಡಿದಳೂ ಅಂದರೆ ಅಲಮೇಲು, ಆನಂದೀ ಬಾಯಿ, ಇಲಾ ದೇಶಪಾಂಡೆ ಅಂತ ಹಿಡಿದು... ಕ್ಷಮಾ ರಾನಡೇ ಅಂತ ಊರಲ್ಲಿರೋ ಸ್ನೇಹಿತೆಯರಿಗೆಲ್ಲ "Hi" ಅಂತ ಹೇಳಿ ಮುಗಿಸೋ ಹೊತ್ತಿಗೆ ರಾತ್ರಿ ಮಲಗೋ ಟೈಂ ಆಗಿ ಹೋಗತಾ ಇತ್ತು.

ಇದರ ಮಧ್ಯೆ ಆಫೀಸ್ ಕೆಲಸಕ್ಕೆ ಅಂತ ವಾಮನಮೂರ್ತಿಗೆ ಟೆಲಿಫೋನು ಸಿಗೋದು ಅಂದರೆ?. ಉಹುಂ, ಸಾಧ್ಯಾನೆ ಇಲ್ಲ. ಅದೇನಾದರೂ ಅಂಥಾ ಅರ್ಜೆಂಟ್ ಕೆಲಸ ಇದ್ದು ಮಾತಾಡಬೇಕೂ ಅಂತ ಇದ್ದರೆ ಹಿಂದಿನ ಬೀದೀಲಿದ್ದ ಮೆಡಿಕಲ್ ಶಾಪ್‌ಗೆ ಹೋಗಿ ಎರಡು ರೂಪಾಯಿ ಕೊಟ್ಟು ಮಾತಾಡಬೇಕು, ಅಥವಾ ಬೊಂಬಾಯಿಗೋ, ಕಲ್ಕತ್ತೆಕ್ಕೋ ಮಾತಾಡೋದಿದ್ರೆ ಟೆಲಿಕಾಮ್ ಆಫೀಸಿಗೆ ಹೋಗಿ ಟ್ರಂಕ್ ಕಾಲ್ ಮಾಡಬೇಕು.

ಎಷ್ಟೋ ಸಲ ಅಂದುಕೊಳ್ತೋನು, ಇವಳಿಗೆ ಒಂದು ಸಲ ಒರಟಾಗಿ ಹೇಳಿ ಬಿಡಬೇಕು—ನಾನು ಮನೇಲಿ ಇರಬೇಕಾದ್ರೆ ನೀನು ಫೋನ್‌ಮುಟ್ಟಕೂಡದು, ಅಂತ.

ಆದರೆ ಅದು ಹೇಳೋಕ್ಕೆ ದಂ ಬರಬೇಕಲ್ಲ! ನಿಜ, ಮದುವೆನಲ್ಲಿ ಇವನೇ ಮೊದಲು ಅವಳ ತಲೆ ಮೇಲೆ ಜೀರಿಗೆ, ಬೆಲ್ಲ ಹಾಕಿದ್ದದ್ದು. ಆದರೆ ಅದರಿಂದ ಏನು ಬಂತು? ಸಂಸಾರಕ್ಕೆ ಬಂದ ನಾಲಕ್ಕನೇ ದಿನಾನೆ ಅವಳು ಲಟ್ಟಣಿಗೆ ತಗೊಂಡು ತಟ್ಟಿದಾಗಲೆ, ಮನೇಲಿ ಯಾರ ಮಾತು ಯಾರು ಕೇಳಬೇಕೂ ಅನ್ನೋ ಮಾಮಲೆ ಫೈಸಲ್ ಆಗಿ ಹೋಗಿತ್ತು—ಅಪೀಲಿಗೆ ಅವಕಾಶಾನೆ ಇಲ್ಲದ ಹಾಗೆ.

ಹ್ಞು, ಅದು ಹಾಳಾಗಿ ಹೋಗಲಿ ಮನೇಲಿ ಫೋನು ಇದೆ ಅನ್ನೊದನ್ನೇ ಮರೆತು ಹಾಯಾಗಿ ಇರೋಣ ಅಂದರೆ, ಅದೂ ಕೂಡ ಸಾಧ್ಯ ಇಲ್ಲ. ವಾಣಿ ಯಾರಿಗಾದರೂ ಫೋನು ಮಾಡಿದ್ದು, ಅವರ ಲೈನ್ ಸಿಗಲಿಲ್ಲ ಅಂತ ಇಟ್ಕೊ ಕೊಳ್ಳಿ. ಒಂದು ಐದು ನಿಮಿಷ ಸುಮ್ಮನೇ ಇದ್ದು ಆ ಮೇಲೆ ಮತ್ತೆ ಡಯಲ್ ಮಾಡೋದಕ್ಕೆ ಬದಲು, ಆ ಐದು ನಿಮಿಷ ಯಾಕೆ waste ಮಾಡಬೇಕೂ ಅಂದುಕೊಂಡು ಅದೇ ಟೈಂನಲ್ಲಿ ಗಂಡನಿಗೆ ಆಫೀಸಲ್ಲೆ ಫೋನ್ ಮಾಡಿ ಬಿಡೋಳು, ಅವನಿಗೆ ಏನು ಕೆಲಸ ಇರತ್ತೋ ಏನೋ ಅನ್ನೋ ಯೋಚನೇ ಕೂಡ ಇಲ್ಲದೆ 10 ನಿಮಿಷ ಕೊರೆಯೋಳು. ಈ ಥರಾ ದಿನಕ್ಕೆ ಏನಿಲ್ಲ ಅಂದರೂ ನಾಲಕ್ಕೋ ಐದೋ ಸಾರಿ ಆಗತಾ ಇರೋದು. ಅಂಥಾ ತಲೆ ಹೋಗೊ ವಿಷಯ ಏನು ಇರತಾ ಇತ್ತು? ಇದ್ದೇ ಇದೆಯಲ್ಲ — ನಿಮ್ಮಂಥೋರನ್ನ ಕಟ್ಟಿಕೊಂಡು ಏಗಬೇಕೂ ಅನ್ನೋದು ನನ್ನ ಹಣೇಲಿ ಬರೆದಿತ್ತು ಅಂತ ಕಾಣತ್ತೆ. ಇಲ್ಲದೇ ಹೋಗಿದ್ದಿದ್ದರೆ ಎಷ್ಟು ಚೆನ್ನಾಗಿ ಬದುಕಬಹುದಾಗಿತ್ತು ಅನ್ನೋ ಮಾಮೂಲಿ ಫಿರ್ಯಾದುಗಳು—ಡಯಲಾಗ್ ಬೇರೆ ಬೇರೆ ಅಷ್ಟೆ, ಆದರೆ ಅರ್ಥ ಎಲ್ಲಾ ಒಂದೇನೆ.

ಥತ್ ಇದರ, ಮನೆಯಿಂದ ಹೊರಗೆ ಬಂದರೂ ಇವಳ fly-by-wire ಅನ್ನೋದು ನಡೀತಿರತಲ್ಲಾ! ಊರ ತುಂಬಾ ಜನ ಹೊಡಕೋತ ಇರತಾರೆ, ಟೆಲಿಫೋನ್ ಕೆಟ್ಟು ಹೋದರೆ ಒಂದು ವಾರ ಆದರೂ ಸರಿ ಹೋಗಲ್ಲ ಅಂತ ಹೇಳಿ. ಆದರೆ ತನ್ನ ಮನೇಲಿರೊ ಫೋನು, ಹಾಳಾದ್ದು ಒಂದು ದಿನಾನಾದ್ರೂ ಕೆಟ್ಟು ಕೂಡಬಾರದೆ? ಹುಂ, ಎಲ್ಲದಕ್ಕೂ ಕೇಳಿಕೊಂಡು ಬಂದಿರಬೇಕು ಅಷ್ಟೆ, ಅಂತ ಅಂದುಕೋತಿರೋನು.

ಅವತ್ತು ಅವನ ಆಫೀಸಿನಲ್ಲಿ ತುಂಬಾನೆ Tension. ಅವರು ಕಳಿಸಿದ್ದ ಅದು ಯಾವದೋ Returns ಸರಿಯಾಗಿ ಇರಲಿಲ್ಲ ಅಂತ ಸೆಂಟ್ರಲ್ ಎಕ್ಸೈಸ್‌ನ ಷೋ-ಕಾಸ್ ನೋಟೀಸ್ ಬಂದಿತ್ತು ಅಂತ ಹೇಳಿ ಅವನ ಬಾಸು ಅವನಿಗೆ 10, 10 ನಿಮಿಷಕ್ಕೂ ಫೋನ್ ಮಾಡಿ ಝಾಡಿಸ್ತಾ ಇದ್ದ. ಅದು ಸಾಲದೂ

ಅಂತ ಆ ವಾಣಿ ಬೇರೆ ಐದಾರು ಸಲ ಫೋನ್ ಮಾಡಿ ಅದೇ ಮಾಮೂಲಿ ರಿಕಾರ್ಡ್ ಹಾಕಿದ್ದು ಬೇರೆ ಆಗಿತ್ತು. ವಾಮನ ಮೂರ್ತಿಗೋ ಪಿತ್ತ ನೆತ್ತಿಗೇರಿತ್ತು. ಇನ್ನೊಂದು ಸಲ ಯಾರಾದರೂ ಸರಿ, ನನಗೆ ಉಲ್ಟಾ ಸೀದಾ ಅಂತ ಫೋನಲ್ಲಿ ಮಾತಾಡಿದ್ರೆ ಮುಖ ಮೂತಿ ನೋಡದೆ Left and right ತಗೋತೀನಿ, ಅಷ್ಟೇ ಅಂದುಕೋತಾ ಆ ಡೆಲಿವರಿ ಚಲನ್ನುಗಳು, ಆ ಗೇಟ್ ಪಾಸುಗಳು ಅನ್ನೋವನ್ನ Reconcile ಮಾಡತಾ ಇದ್ದ.

ಆ ಮಧ್ಯದಲ್ಲೆ ಇನ್ನೊಂದು ಸಲ ಫೋನ್ ಹೊಡಕೋತು ಮುಖ ಸಿಂಡರಿಸಿಕೊಂಡೇ ಅದನ್ನ ತೆಗೆದುಕೊಂಡ.

"ವಾಮನ ಮೂರ್ತಿ....ಯಾರು ಮಾತಾಡ್ತಾ ಇರೋದು ?"

"ಊಹುಂ, ಹೇಳೊಲ್ಲ....ಯಾರಿರಬಹುದು, ನೀವೇ ಹೇಳಿ"—ಹೆಣ್ಣು ಧ್ವನಿ. ಇನ್ನು ಯಾರದು ? His master's voice!

ಇವತ್ತು ಇವಳದ್ದು ಯಾಕೋ ವಿಪರೀತವಾಯ್ತು. ಇನ್ನು ಸುಮ್ಮನೇ ಇದ್ದರೆ ಆಗೊಲ್ಲ ಸರಿಯಾಗಿ ಬುದ್ಧಿ ಕಲಿಸಬೇಕು. ಅಂದುಕೊಂಡವನೆ,

"ಒಂದು ನಿಮಿಷ....Let me try... ಹಾಂ ಗೊತ್ತಾಯ್ತು.. ಜೋಸೆಫಿನ್ Old flame! ಕಾಲೇಜ್ ಬಿಟ್ಟ ಮೇಲೆ ಇಷ್ಟು ವರ್ಷ ಆದ ಮೇಲೇನ ನನ್ನ ಜ್ಞಾಪಕ ಬಂದಿದ್ದು ?-- ಇರಲಿ ಈಗ ಹ್ಯಾಗೆ ಇದ್ದೀಯ ನೀನು ? ಕಾಲೇಜಲ್ಲಿ ಇದ್ದಾಗ ಭಾರಿ ದುಡುಮೀ ಥರ ಇದ್ದವಳು ನೀನು—ಏನೋ ಅಂದು ಕೊಂಡಿದ್ದೆ, ಈಗ ಸ್ವಲ್ಪ Reduce ಆಗಿರಬಹುದೂ ಅಂತ...ಆದರೆ ನಿನ್ನ ಧ್ವನೀ ನೋಡಿದ್ರೆ ನೀನು ಒಳ್ಳೆ ಟುನ್ ಟುನ್ ಥರ ಆಗಿದ್ದೀಯ ಅನ್ನಿಸತ್ತೆ...ಹ್ಹಾ, ಹ್ಹಾ..."

"ತಪ್ಪು... Try again...." ಧ್ವನೀನಲ್ಲಿ ಸ್ವಲ್ಪ ಅಸಹನೆ ಬರತಾ ಇದ್ದ ಹಾಗಿತ್ತು.

"ಹಾಗಾದರೆ..,. ನೀನು.... ನೀನು ಮೃದುಲಾ ?...."

"ಥತ್, ನಾಚಿಕೆ ಇಲ್ಲದವರು! ಅದೆಷ್ಟು ಜನ Girl-friendಗಳು ಈ ಕಮಂಗಿ ಮುಖಕ್ಕೆ! ಆಯಿತು, ಕಡೇ ಛಾನ್ಸು...."

"ಹೋ.... ಈಗ ಗೊತ್ತಾಯಿತು.... ಅನುಮಾನಾನೆ ಇಲ್ಲ, ನೀನು ಜುಬೇದಾನೆ.... ಆದರೆ ನಿನ್ನ Voiceಗೆ ಏನಾಗಿದೆ ಈಗ?.... ಕಾಲೇಜಲ್ಲಿದ್ದಾಗ ನೀನು ಹಾಡು ಹೇಳಿದೇ ಅಂದರೆ ಒಳ್ಳೆ ಶಂಷದ್ ಬೇಗಂ ಥರಾ ಇರ್ತಾ ಇತ್ತು.... ಆದರೆ ಇವತ್ತು ನೋಡಿದ್ರೆ....You sound more like the old hag I married...."

ಧಡ್ ಅಂತ ಹೇಳಿ ಆ ಕಡೆ ರಿಸೀವರ್‌ನ ಕುಕ್ಕಿದ ಶಬ್ದ ಕೇಳಿಸಿತು.

ಸದಾ ಟಿ. ವಿ. ನೋಡುವ ನಮ್ಮ ಪಕ್ಕದ ಮನೆ ಮುದುಕರು ಮೊನ್ನೆ ಲೋಕಾಭಿರಾಮವಾಗಿ ಮಾತನಾಡುತ್ತಿದ್ದರು.

"ನೋಡಿ ನಮ್ಮ ನಾಡಿನಲ್ಲಿ ಪಾದಚಾರಿಗಳಿಗೆ ರಕ್ಷಣೆ ಇಲ್ಲ. ಸಂಜೆ ಹೊತ್ತು ಹೆಣ್ಣು ಮಕ್ಕಳಿಗೆ ರಕ್ಷಣೆ ಇಲ್ಲ. ಹೈವೇಗಳಲ್ಲಿ ಲಾರಿಗಳಿಂದ ರಕ್ಷಣೆ ಇಲ್ಲ ಆದರೆ ನಮ್ಮ ಹಲ್ಲುಗಳು ಮತ್ತು ತ್ವಚೆಗೆ ಸಂಪೂರ್ಣ ರಕ್ಷಣೆ. ಎಂಥ ವಿಪರ್ಯಾಸ ಅಂತೀನಿ".

ಫಲ ಕೊಡದ ಮರ

ಅರಳೀ ಮರ – ಬೇವಿನ ಮರ
ಮದುವೆ ಮಾಡಿಸಿ
ಮತ್ತೆ ಮತ್ತೆ ಮರ
ಸುತ್ತಿದರೂ ಬಂಜೆ
ಬಸಿರಾಗಲಿಲ್ಲ – ಮಂತ್ರ
ವರ ಕೊಡಲಿಲ್ಲ – ತಂತ್ರ
ಫಲ ಕೊಡಲಿಲ್ಲ!

—ದೊಡ್ಡರಂಗೇಗೌಡ

ನೀರು! ನೀರು!!

ಶಾಂತಾ ರಘು

ಒಂದಾನೊಂದು ಕಾಲದಲ್ಲಿ, ಬೇಸಿಗೆ ಬಂದ್ರೆ, ಬಳ್ಳಾರಿ, ಮದರಾಸು, ರಾಮಗುಂಡಂ ಮುಂತಾದ ಬಿಸಿಲು ಪ್ರದೇಶಗಳಲ್ಲಿ ವಾಸ ಮಾಡೋ ದುರದೃಷ್ಟಶಾಲಿಗಳು, City of Gardens, ಬೆಂಗಳೂರಿಗೆ ಓಡಿ ಬಂದು, ನೆಂಟರಿಷ್ಟರ ಮನೆಗಳಲ್ಲಿ ತಂಪಾಗಿ ಬೇಸಿಗೆ ಕಳೀತಾ ಇದ್ರು.

"ಎಷ್ಟು ಪುಣ್ಯ ಮಾಡಿದ್ರೋ ನೀವೆಲ್ಲಾ! ಇಂಥಾ ಥಂಡಿ ಹವೆ–ಥಂಡಿಯಾಗಿ ನೀರು! ನಾವೇ ಪಾಪಿಗಳು!" ಅಂತ ಹೊಟ್ಟೆ ಉರ್ಕೊಳ್ತಾ ಇದ್ರು.

ಇನ್ನೇನು ಪರ್ವಾಗಿಲ್ಲ. ಅವರೆಲ್ಲರ ಹೊಟ್ಟೆಗಳಿಗೆ ಹಾಲೆರೆದಂತಾಗಿರಬಹುದು. ನೀರಿಲ್ಲದೆ ನರಳುವ ಪಾಪಿಗಳು ಈಗ ಬೆಂಗಳೂರು ವಾಸಿಗಳೇ. ಬೇಸಿಗೆ ಶುರುವಾಗೋಕೆ ಮುಂಚೆಯೇ ಎಷ್ಟೋ ಜನ ತಮ್ಮ ನೆಂಟರಿಗೆ ಕಾಗದ ಬರೆದಾಗಿರಬಹುದು. "ಯಾರೂ ಬೆಂಗಳೂರಿಗೆ ಬರ್ಬೇಡಿ. ವಾರಕ್ಕೊಮ್ಮೆ ನೀರ್ಬಿಡ್ತಾ ಇದಾರೆ. ನಾವೇ 2 ತಿಂಗಳು ದೇಶಾಂತರ ಹೋಗ್ತಾ ಇದೀವಿ" ಅಂತ.

ಅಲ್ಲಾ, ಬೆಂಗಳೂರಲ್ಲಿ ಹೀಗೆ ಜನ, ನೀರಿಗೆ ಹಾಹಾಕಾರ ಮಾಡೋ ಕಾಲ ಬಂತೆ? ಗಂಭೀರವಾಗಿ ಮನೆಯೊಳಗೆ ಸಂಸಾರ ಮಾಡಿಕೊಂಡಿದ್ದ ನಾರಿಯರೆಲ್ಲ, ನೀರಿಗಾಗಿ ಬಕೀಟು, ಬಿಂದಿಗೆ ಹಿಡಿದು, ಬೀದಿಗೆ ಬರೋ ಹಾಗೆ ಮಾಡಿ, ನಮ್ಮ ಜಲ ಮಂಡಲಿ ಪುಣ್ಯ ಕಟ್ಟಿಕೊಂಡಿತು.

ರಾಜಾಜಿನಗರದಲ್ಲಿರೋ ನನ್ನ ಗೆಳತಿ ಲೀಲಳ ಗೋಳು ಹೇಳಿತೀರದು. ಗಂಡ, ಹೆಂಡತಿ ಇಬ್ರೂ ಕಾರಲ್ಲಿ ಕೊಡ, ಬಿಂದಿಗೆ ಎಲ್ಲ ತುಂಬಿಕೊಂಡು ಹೋಗಿ, ನಲ್ಲಿ ಹತ್ರ ಕ್ಯೂ ನಿಲ್ತಾರಂತೆ, ನಡು ರಸ್ತೇಲಿ, ನಡು ರಾತ್ರೀಲಿ. ಮೊನ್ನೆ ಹೀಗೇ ಗಂಡ ಲುಂಗಿಧಾರಿಯಾಗಿ, ಹೆಂಡತಿ ನೈಟಿ ಧಾರಿಣಿಯಾಗಿ ಕ್ಯೂನಲ್ಲಿ ನಿಂತಿದ್ರೆ, "ಅಯ್ಯೊ ಶಿವನೇ! ಅವ್ವಾರೆ! ನೀವೂ ಬಂದ್ರಾ ನೀರಿಗೆ?" ಅಂತ ಕೂಗಿದವರು ಯಾರಪ್ಪಾ ಅಂತ ನೋಡಿದ್ರೆ, ಮನೆ ಕೆಲಸದಾಕೆ ನಿಂಗಮ್ಮ!

ಅವಳೂ ನೀರಿಗೆ ಕ್ಯೂ ನಿಂತಿದ್ಲು! ಏನ್ಮಾಡೋದು? ಕಷ್ಟ ಕಾಲದಲ್ಲಿ ಯಾರು ಅರಸ, ಯಾರು ಆಳು? ಇಬ್ರಿಗೂ ಕಾಮನ್ ಗೋಳು!

"ಯವ್ವೀ! ನಮ್ಮುಖಾನಾರಾ ನೋಡ್ತ್ಯಾರಾ ಈ 'ಸಾವ್ಕಾರವ್ರೋರು ಮೊದ್ಲೆಲ್ಲಾ? ಈಗ ನೋಡಿದ್ಯಾ ನಮ್ಹಿಂದೇನೇ ನೀರಿಗ್ ನಿಂತವ್ರೆ!" ಅಂತ ಮುಂದೆ ನಿಂತಿದ್ದ ಸ್ಲಂ ವಾಸಿಯೊಬ್ಬಳು ಅಚ್ಚರಿ ಪಡ್ತಾಯಿದ್ಲು.

ಘಂಟೆಗಟ್ಲೆ ದಿನಾ ನಿಂತಿರೋ ಈ ಕ್ಯೂ ನೋಡಿ, ಒಬ್ಬ ಘಟ್ಟಿಗ ಅಲ್ಲೊಂದು ಸೋಡಾ, ಬೀಡಾ ಅಂಗಡೀನೇ ತೆಗೆದಿದಾನಂತೆ. ತಿರುಪತಿಯ ಧರ್ಮ ದರ್ಶನದ ಕ್ಯೂ ಪಕ್ಕದಲ್ಲಿ ಎಳನೀರು, Fonta ಮಾರೊಲ್ವೆ? ಆ ತರಹ ನೀರೂ ದೇವರಲ್ವೆ? ಇನ್ನೇನು ಸ್ವಲ್ಪ ದಿನಗಳಲ್ಲಿ, ನೀರಿನ ಕ್ಯೂಗಳ ಪಕ್ಕದಲ್ಲಿ ಇನ್ಯಾರಾದರೂ ಬುದ್ಧಿವಂತ ಒಂದು ಟೆಂಟ್ ಸಿನಿಮಾ ತೆಗೆದರೂ ತೆಗೆದ!

N. R. ಕಾಲನಿಯಲ್ಲಿರೋ ನನ್ನ ಮತ್ತೊಬ್ಬ ಗೆಳತಿ ರಮಾ ಮಹಾ ಗಟ್ಟಿಗಾತಿ. ಯುಗಾದಿ ದಿನ ಸಹ ಅಲ್ಲಿ ನೀರಿಲ್ವಂತೆ. ರಾತ್ರಿ ಎಲ್ಲಾ ನೀರಿಗಾಗಿ ಅಲೆದರಂತೆ. "ಅಯ್ಯೋ! ಶಿವರಾತ್ರಿಯಾದ್ರೂ ಆಗಿದ್ರೆ ಜಾಗರಣೆ ಮಾಡಿದ ಪುಣ್ಯಾನಾದ್ರೂ ಬರ್ತಿತ್ತಲ್ಲ!" ಅಂತ ಅವಳ ಅತ್ತೆ ಹಲುಬಿದರಂತೆ. ರೋಸಿಹೋದ ರಮಣಿಯರು ನೋಡಿದ್ರು—ಸರಿ, ಇನ್ನು ಗಂಡಂದಿರನ್ನೆಲ್ಲಾ ನಂಬಿ ಕೂತರೆ ಪ್ರಯೋಜನವಿಲ್ಲ ಅಂತ ಡಿಸೈಡ್ ಮಾಡಿದ್ರು, ತಾವೇ ಗುಂಪು ಕಟ್ಟಿಕೊಂಡು ಹೋಗಿ ಜಲ ಮಂಡಲಿಯ ಇಂಜಿನಿಯರ್ ಮನೆಗೆ ಮುತ್ತಿಗೆ ಹಾಕಿದರು. "ನೀರಿಲ್ಲ, Pressure ಇಲ್ಲಾ ನಾವೇನು ಮಾಡೋದು?" ಅನ್ನೋ ಯಾವ ದ್ರಾವಿಡ ಪ್ರಾಣಾಯಾಮಕ್ಕೂ ಜಗ್ಗದೆ, ರಾತ್ರಿಯೆಲ್ಲಾ ಧರಣಿ ಕೂತರು. ಧಡಧಡನೆ ನೀರು ಬಿಟ್ಟ ಮೇಲೇ ವಿಜಯೋತ್ಸಾಹದಿಂದ ಮನೆಗೆ ಹೋದರು. ಹೀಗೆ ನೀರೆಯರು ಸೆರಗು ಬಿಗಿದು, ನೀರಿಗಾಗಿ ಕಾಳಗ ಮಾಡೋ ಕಾಲ ಬಂತೆ?

ಮೊನ್ನೆ ಸ್ನೇಹಿತರ ಮನೆಗೆ ಪಾರ್ಟಿಗೆ ಹೋದರೆ, ಎಲ್ಲರ ಬಾಯಲ್ಲೂ ಒಂದೇ ವಿಷಯ—ಬೆಂಗಳೂರಲ್ಲಿ ಅಪರೂಪವಾಗ್ತಾ ಇರೋ ನೀರು.

"ಈ ಬಿಸ್ಲಲ್ಲಿ ಧಾರಾಳವಾಗಿ ನೀರೂ ಕುಡ್ಯೋ ಹಾಗಿಲ್ಲ. ಟೆರಿಬಲ್ ಬೋರು! ಸುಮ್ನೆ, ನೀರಿಗೆ ಬದ್ಲು ಬಾರಿಗೆ ಹೋಗಿ ಬೀರು ಕುಡ್ಯೋದೇ ವಾಸಿ ಇನ್ಮೇಲ" ಅಂದ ರಾಮಮೂರ್ತಿ.

"ನಿಮ್ದು ಹ್ಯಾಗೋ ಗೊತ್ತಿಲ್ಲ ಸಾರ್. ನಾನೇನಾದ್ರೂ ದಿನಾ ಬಾರಿಗೆ

ಹೋದ್ರೆ, ಬಾರುಕೋಲು ತೊಗೋತಾರೆ ನಮ್ಮನೇವ್ರು !" ತಮ್ಮ ಹಾಸ್ಯಕ್ಕೆ ತಾವೇ ನಕ್ಕರು ಶಂಕರಯ್ಯ—ಹೆಂಡತಿಯ ಬಿರುಗಣ್ಣು ತಪ್ಪಿಸಿ.

"ಈಗೆರಡು ವಾರಗಳಿಂದ ನಮ್ಮನೇಲಿ ಎಲ್ರೂ Sponge bath ಮಾಡ್ತಾ ಇದೀವಿ ಸಾರ್. ಏನು ಕರ್ಮವೊ ? ಹೋದ ಜನ್ಮದಲ್ಲಿ ಯಾರಿಗೋ ನೀರು ಕೊಡದೆ ಸಾಯಿಸ್ಬಿರಬೇಕು. ಅದಕ್ಕೇ ಈಗ ಹೀಗೆ ಪನಿಷ್ ಮಾಡ್ತಾ ಇದಾನೆ ಭಗವಂತ" ಅಂತ ಶಾಸ್ತ್ರಿಗಳು ಹಲುಬಿದರು.

"ಇನ್ಮೇಲೆ ಎರಡು ದಿನಕ್ಕೊಮ್ಮೆ ನೀರು ಬಿಡ್ತಾರಂತೆ. ಹೀಗೇ ಆದ್ರೆ ಎಲ್ರೂ ABCಗೆ ಮೆಂಬರ್‌ಗಳಾಗೋದು ವಾಸಿ" ಅಂದ್ರು ಪ್ರಸಾದ್. "ಅದೇನಪ್ಪ ಅದು ABC?'' ಮಿಸೆಸ್ ರಾಮಮೂರ್ತಿ ಕೇಳಿದ್ರು. ಇನ್ನೇನು ? Anti Bathing Committee!'' ಸುತ್ತಲೂ ದೊಡ್ಡ ನಗು ಎದ್ದಿತು.

"ಅಯ್ಯೋ ! ಈ ಬಿಸ್ಲಲ್ಲಿ ಸ್ನಾನಾ ಮಾಡ್ದೇ ಇರೋದೆ ? We will start smelling!'' ಮೊಂಡು ಮೂಗನ್ನು ಸಿಂಡರಿಸಿಕೊಂಡ್ರು ಮಿಸೆಸ್ ಶಂಕರಯ್ಯ.

"ಏನೂ ಮಾಡೋಕಾಗೊಲ್ಲ. Talcum powder ಕಂಪೆನಿಯವರ್ಗೆ ಶುಕ್ರ ದೆಶೆ ಹೊಡೆಯುತ್ತೆ ಬಿಡಿ !" ಗಂಡಸರೆಲ್ಲ 'ಹೋ ಹೋ' ಅಂತ ನಕ್ಕರು.

ಅಷ್ಟರಲ್ಲಿ ಬರ್ತ್ ಡೇ ಹುಡುಗಿ ಆರು ವರ್ಷದ ಸುಷ್ಮಾ, "ಆಂಟೀ, ಆಂಟೀ ! ನೀರಿಲ್ದೆ ಇದ್ರೆ ಏನು ? Aliceಉ, Wonder land ಗೆ ಹೋದಾಗ ಅಲ್ಲಿ ನೀರೇ ಇರ್ಲಿಲ್ವಂತೆ. ಎಲ್ಲಾದಕ್ಕೂ Apple ಜ್ಯೂಸ್ ಯೂಸ್ ಮಾಡ್ತಾ ಇದ್ರಂತೆ !" ಅಂದ್ಲು ಮುದ್ದು ಮುದ್ದಾಗಿ. "ಸರಿ, ಸರಿ, ಈ ಬೆಂಗಾಡು ಬೆಂಗಳೂರಿನ Apples ಹಿಂಡಿದ್ರೆ, ನಮಗೇ ಬೆವರು ಸುರಿಯುತ್ತೆ, ಕಣ್ಣೀರು ಸೋರತ್ತೆ, ಜ್ಯೂಸ್ ಎಲ್ಲಿ ಬರತ್ತೆ ?" ಅಂದಳು ಇಂದಿರಾ ರೋಸಿಹೋಗಿ. ಅವಳಿರೋದು ಕನಕಪುರ ರಸ್ತೆಯಲ್ಲಿ. ನಲ್ಲಿಯಲ್ಲಿ ನೀರಿನ ಮುಖ ನೋಡಿ ಒಂದು ವಾರ ಆಗಿತ್ತಂತೆ. ಯಾವಾಗ ತಿರುಗಿಸಿದ್ರೂ ಅವರ್ಮನೆ ನಲ್ಲಿ, ರೋಡ್ ಸೈಡ್ ರೋಮಿಯೋ ತರಹ Whistle ಹೊಡೀತಾನೇ ಇರತ್ತಂತೆ.

"ಏನೋಪ್ಪ ! ಹೋಗೋ ರೀತಿ ನೋಡಿದ್ರೆ, ರೇಷನ್ ಕಾರ್ಡಿನಲ್ಲಿ ನೀರು ಕೊಡೋಕೆ ಶುರು ಮಾಡ್ತಾರೋ ಏನೊ?" ಅಂತ ನಮ್ಮವರು ಯೋಚನಾಕ್ರಾಂತರಾದರು. ಹಾಸ್ಯಕ್ಕೆಂದರೂ ಆ ನೆನಪೇ ಭಯಂಕರವಾಗಿತ್ತು.

"ಅಲ್ಲಾ—ನಮ್ಮ ಕ್ಯಾಂಟೀನ್‌ನವ, ಈ ಜಲ ಕ್ಷಾಮ ಬಂದ ಕೂಡ್ಲೇ ಒಂದು ಕಪ್ ಟೀಗೆ 25 ಪೈಸೆ ಬೆಲೆ ಏರಿಸ್ಬಿಟ್ಟ—ಗೊತ್ತೆ?" ಅಂದ್ರು ಪ್ರಸಾದ್.

"ಅಷ್ಟೇ ಅಲ್ಲಾರೀ ! 'ನಿಮ್ಗೆ ಯಾವ ನೀರಿನ ಟೀ ಬೇಕು ? ಭಾವಿ ನೀರಾದ್ರೆ ಬೆಲೆ ಕಡಿಮೆ. ನಲ್ಲಿ ನೀರಂದ್ರೆ ಜಾಸ್ತಿ' ಅಂತ ಬೇರೆ ಹೇಳ್ತಾನೆ!" ಅಂದರು ಮಿಸೆಸ್ ಪ್ರಸಾದ್. ನಂಬ್ತೀರಾ ?

ಒಟ್ಟಿನಲ್ಲಿ ನಮ್ಮ ಸುಂದರ ನಗರದಲ್ಲಿ ಎಲ್ಲಿ ನೋಡಿದ್ರೂ ನಲ್ಲಿಗಳ ಮುಂದೆ ಉದ್ದಕ್ಕೆ ಕ್ಯೂ ನಿಂತು ಬೆಂದು. ಬಸವಳಿದು, ಬೇಸತ್ತ ಜನ, ನೀರಿನ ಲಾರಿಗಳ ಓಡಾಟ, ಬೋರ್‌ವೆಲ್‌ಗಳ ಅರಚಾಟ; ತೋಟಗಳ ತವರೂರು ಬೆಂಗಳೂರು ಇದೇಯೆ ?

ನಗರದ 40 ದಶ ಲಕ್ಷ ಜನರಿಗೆ ದಿನಾ 1,200 ಮಿಲಿಯನ್ ಲೀಟರ್ ನೀರು ಬೇಕು. ಈಗ ಸಿಗ್ತಾ ಇರೋದೋ 320 ಮಿಲಿಯನ್ ಲೀಟರ್. ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ. ಕುಡಿಯುವ ನೀರಿನ ಭೀಕರ ಪರಿಸ್ಥಿತಿಯನ್ನು ಸುಧಾರಿಸ್ತಾ ಇರೋ ರೀತಿಯೋ, ಆ ದೇವರಿಗೇ ಪ್ರೀತಿ. ಬೇಕಾದವರ ಮನೆಯಲ್ಲಿ ಜೋರಾಗಿ ಬರೋ ನೀರು, ಮಿಕ್ಕವರ ಮನೆಗಳಲ್ಲಿ ದಾರದಂತೆ ಸೋರತ್ತೆ. 9ನೇ ಬ್ಲಾಕ್‌ನಲ್ಲಿರೋ ನನ್ನ ಕಸಿನ್ ಮನೇಲಿ ನೀರು ಬಂದು ಹತ್ತು ದಿನಗಳಾದುವು. ಅವರ ಪಕ್ಕದ ರಸ್ತೆ ರಿಂಗ್ ರೋಡಿನಲ್ಲಿ 24 ಗಂಟೆ ನೀರು ಸುರೀತಾನೇ ಇರತ್ತೆ. ನಮ್ಮ ಜಲ ಮಂಡಲಿಯವರು ಸಮಾನವಾಗಿ ನೀರು ವಿತರಣೆ ಮಾಡೋ ವೈಖರಿ ಇದು !

ರಾಜಾಜಿನಗರದಲ್ಲಿ ಲೀಲಳ ಮನೆ ಹತ್ರ ಹೋದ ವಾರ ದೊಡ್ಡ ಗಲಾಟೆಯೇ ಆಯ್ತಂತೆ. ಮೇಲಿನವರಿಗೆ ಬೇಕಾದವರೊಬ್ಬರ ಮನೆಗೆ ಅಪರಾತ್ರಿಯಲ್ಲಿ ಲಾರಿಯಲ್ಲಿ ನೀರಿನ Special delivery ಆಗ್ತಾ ಇದ್ದ ಸುಳಿವು ಸಿಕ್ಕಿ ಅವರ Localityಯವ್ರೆಲ್ಲಾ ಹೊಂಚು ಹಾಕಿ ಕೂತಿದ್ರು. ಲಾರಿ ಬಂದ ಕೂಡ್ಲೇ, ಮುತ್ತಿಗೆ ಹಾಕಿ, ಮಾಲು ಸಮೇತ ಹಿಡಿದು. ಟೈರಿನ ಗಾಳಿ ಎಲ್ಲಾ ತೆಗೆದು, ಗುಲ್ಲೋ ಗುಲ್ಲೆಬ್ಬಿಸಿದರಂತೆ !

ಗಾಳಿ ಬಂದಾಗ ತೂರಿಕೋ ಅನ್ನೋ ಮಾತನ್ನ ಅಕ್ಷರಶಃ ಪಾಲಿಸ್ತಾ ಇದಾರೆ ಕೆಲವರು. ನಗರದ ನಾನಾ ಕಡೆ ನೀರಿನ ಬಿಸಿನೆಸ್ಸೇ ಶುರು ಮಾಡಿ ಬಿಟ್ಟಿದಾರೆ. ಒಂದು ಟ್ಯಾಂಕರ್ ನೀರಿನ ಬೆಲೆ 450 ರೂಪಾಯಂತೆ. ರಾಜಾಜಿ

ನಗರ, ನಂದಿನಿ ಲೇಔಟ್ ಎಲ್ಲಾ ಕಡೆ ಒಂದು ಬಕೀಟು ನೀರಿನ ಬೆಲೆ ಒಂದು ರೂಪಾಯಿ !

"ಕೇಳೋಕೆ ಅಸಹ್ಯ ಆಗುತ್ತೆ ಸಾರ್ ! ಯಾಕೆ ಕಾರ್ಪೊರೇಷನ್‌ನಿನ ದಾಕ್ಷಿಣ್ಯ, ನಾವೇ ಒಂದು ಬೋರ್‌ವೆಲ್ ಹಾಕಿಸಿಕೊಳ್ಳೋಣ ಅಂತ ಅದನ್ನೂ ಟ್ರೈ ಮಾಡಿದೆ. 150 ಅಡಿ ಬೋರ್ ಮಾಡಿದ್ರೂ ಒಂದು ಹನಿ ನೀರಿಲ್ಲ. ಹಣ ನೀರಿನಂತೆ ಖರ್ಚಾಗಿದ್ದೇ ಲಾಭ !" ಅಂತ ಮಾಧವನ್ ನಿಟ್ಟುಸಿರುಬಿಟ್ಟರು.

"ಚೆನ್ನಾಗಿ ಹೇಳಿದ್ರಿ ಮಾಧವನ್ ! ಹಣಾನ ನೀರಿನಂತೆ ಖರ್ಚು ಮಾಡೋ ಕಾಲ ಹೋಯ್ತು ಸಾರ್ ! ನೀರನ್ನು ಹಣದಂತೆ ಖರ್ಚು ಮಾಡ್ಬೇಕಾಗಿದ್ಯಲ್ಲ ಈಗ ?" ಅಂದ್ರು ಶಂಕರಯ್ಯ. ಆವರ ಮಾತಿನಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ ಬಿಡಿ.

ಐದು ವರ್ಷದ ಸುಜಾತಾಗೆ ಅದು ಮೊದಲ ರೈಲು ಪ್ರಯಾಣ. ಅಮ್ಮ ಯಾವುದೋ ಕಾದಂಬರಿಯಲ್ಲಿ ಮಗ್ನರಾಗಿದ್ದರೂ, ಮಗುವಿನ ಪ್ರಶ್ನೆಗಳು ಅವಿರತವಾಗಿ ಸಾಗಿದ್ದವು.

"ಅಮ್ಮ, ಅಮ್ಮ, ತಲ್ಪ ಪೊತ್ತಿಗೆ ಮುಂಚೇ, ಲೈಲು ನಿಂತ್ಕೊಂಡಿತ್ತಲ್ಲ, ಆ ಷೇಷನ್‌ಗೆ ಒಂದಿನ ಷೇಷನ್ ಯಾವ್ದಮ್ಮಾ ?"

"ಅಯ್ಯೋ ಅದೆಲ್ಲಾ ಕಟ್ಕೊಂಡು ನಿನಗೇನೇ ? ಸುಮ್ನೆ ಕೂತ್ಕೋಬಾರ್ದೇ ?"

"ಆ ಷೇಷನ್‌ನಲ್ಲೇ ಅಪ್ಪ ಇಳೀತು ಅದಕ್ಕೆ ಕೇಳ್ದೆ"

ವರ್ಜಿನ್ನು

ಅಲ್ಲೊಂದಿತ್ತು ಬಾರು
ಸ್ತ್ರೀಯರದೇ ಕಾರು ಬಾರು
ಬೇಕು ವರ್ಜಿನ್ನು ಅಂದ ಗಿರಾಕಿ
ತಂದಿತ್ತಳು ವರು ಜಿನ್ನು ಬೆರಕಿ

— ಎಚ್. ಎಲ್. ಕೇಶವ ಮೂರ್ತಿ

ನೀವು ಹೇಳಿದ್ದು ನಿಮ್ಮ ಮಕ್ಕಳಿಗೆ ಅರ್ಥವಾಗುತ್ತದೆಯೇ ?

–ಶಿವ

"**ಮ**ಗೂ ಊಟ ಮಾಡ್ತೀಯೇನೋ ? "

"ಷ್, ಸುಮ್ಮನಿರಮ್ಮ. ಚಿತ್ರಹಾರ್ ಬರ್‍ತಾ ಇದೆ. ಸುಮ್ನೆ ಗಲಾಟೆ ಮಾಡಬೇಡ"

ಮೇಲಿನ ಸಂಭಾಷಣೆಯಲ್ಲಿನ 'ಮಗು' ಹದಿನೆಂಟು ವರ್ಷದ ಸುಪುತ್ರ. ತಾಯಿಗೆ ಮಗ ಊಟ ಮಾಡಿ, ಆರೋಗ್ಯವಂತನಾಗಿ ಬಾಳಲಿ ಎಂಬ ಆಸೆ. 'ಮಗು' ಜುಹಿ ಛಾವ್ಲ, ನೀಲಂ, ಭಾಗ್ಯಶ್ರೀ ಇವರುಗಳ ಲೋಕದಲ್ಲಿ ಮುಳುಗಿದ್ದು, ಹೊರಗಿನ ಪ್ರಪಂಚಕ್ಕೆ ಎಳೆದು ತರುವಂತಹ ಯಾವ ಮಾತೂ ಅವನಿಗೆ ರುಚಿಸದು. ಅದು ಅವನ ಭಾಗಕ್ಕೆ 'ಸುಮ್ನೆ ಗಲಾಟೆ'

ಈ ರೀತಿ ಯುವ ಜನಾಂಗದೊಡನೆ ದಿನಕ್ರಮೇಣ ಸಂಪರ್ಕವನ್ನು ಕಳೆದು ಕೊಳ್ಳುತ್ತಿರುವ ತಾಯಿ ತಂದೆಯರ ಕರುಣಾಜನಕ ಸ್ಥಿತಿಗೆ ಮರುಗಿ, ಕನಿಕರದಿಂದ ಕೆಳಗಿನ ಪ್ರಶ್ನಾವಳಿಯನ್ನು ನೀಡಲಾಗಿದೆ. ಸರಿಯುತ್ತರಗಳನ್ನು ಕದ್ದು ನೋಡದೇ, ನಿಮ್ಮ ಉತ್ತರಗಳನ್ನು ಗುರುತಿಸಿ.

೧) ಜುಮ್ಮ–ಚುಮ್ಮ ಎಂದರ ಯಾರು ಅಥವಾ ಏನು ?

ಅ) ಜೊಮೋ ಕೆನ್ಯಾಟರ ಅಕ್ಕನ ಮಗ

ಆ) ನಿಮ್ಮ ಒಂದು ವರುಷದ ಮೊಮ್ಮಗು ಕಲಿತ ಮೊದಲ ಪದಗಳು

ಇ) ಒಂದು ಸುಪ್ರಾಪ್ಯವಾದ ಹಾಡಿನ ಹೆಸರು.

೨) ಸೋನಮ್ ಎಂದರೆ ಏನು ಅಥವಾ ಯಾರು ?

ಅ) ಒಂದು ಮಾದರಿಯ ಅಕ್ಕಿ

ಆ) ಸಣ್ಣಮ್ಮ ಎಂಬುದರ ತತ್ಸಮ

ಇ) ಜನಪ್ರಿಯ ಹಿಂದೀ ತಾರೆ.

೩) ಪಾರ್ವತಿ . . . . (ಕೆಳಗಿನ ಪದಗಳಲ್ಲಿ ಸೂಕ್ತವಾದುದನ್ನು ಆರಿಸಿ, ಖಾಲಿ ಸ್ಥಳವನ್ನು ತುಂಬಿಸಿ)

ಅ) ಪರಮೇಶ್ವರ

ಆ) ದೇವಿ

ಇ) ಖಾನ್

೪) ಗುರು ಎಂದರೆ ಯಾರು ?

ಅ) ಶ್ರೀ ಶಂಕರ ಭಗವತ್ಪಾದರು

ಆ) ಶ್ರೀ ರಮಣ ಮಹರ್ಷಿಗಳು

ಇ) ಯಾವದಾದರೊಬ್ಬ ಸ್ನೇಹಿತ (ಉದಾ:– 'ಬಂಬಾಟಾಗಿತ್ತು ಗುರು')

೫) ಸಮ್‌ಥಿಂಗ್ ಪದದ ಅರ್ಥವೇನು ?

ಅ) ಯಾವುದಾದರೊಂದು ವಸ್ತು ವಿಶೇಷ

ಆ) ವ್ಯಾಕರಣದ ಕರ್ಮ ಪದ

ಇ) ಲಂಚ (ಉದಾ:– ಸಮ್‌ಥಿಂಗ್ ಕೊಟ್ರೆ ಎಲ್ಲಾ ಸರಿ ಹೋಗತ್ತೆ ಗುರು)

೬) "ಐ ಸ್ವೇರ್" ಅಂದರೇನು ?

ಅ) ನಾನು ಪ್ರಮಾಣ ಮಾಡುತ್ತೇನೆ

ಆ) ನಾನು ಬಯ್ಯಳದ ಮಾತನ್ನಾಡುತ್ತೇನೆ

ಇ) ನಿಮ್ಮ ಹೇಳಿಕೆಯನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ

೭) 'ಮೀನಾಕ್ಷಿ' ಅಂದ ತಕ್ಷಣ ನಿಮಗೆ ಜ್ಞಾಪಕ ಬರುವ ಪದ ಯಾವುದು ?

ಅ) ಮಧುರೆ

ಆ) ಮಿಟಕಲಾಡಿ

ಇ) ಶೇಷಾದ್ರಿ

೮) ಆಮೀರ್ ಖಾನ್ ಮತ್ತು ಸಲ್ಮಾನ್ ಖಾನ್ ಯಾರು ?

ಅ) ಔರಂಗ ಜೇಬನ ಆಸ್ಥಾನದಲ್ಲಿನ ಮಂತ್ರಿಗಳು

ಆ) ಚೆಂಗೀಸ್ ಖಾನನ ಅವಳಿ ಮೊಮ್ಮಕ್ಕಳು

ಇ) ಭಾರತದ ತರುಣಿಯರ 'ಹೃದಯ ಬಡಿತ'ಗಳು (Heart Throbs)

ಉತ್ತರಗಳು :–

ನಿಮ್ಮ ಎಲ್ಲ ಉತ್ತರಗಳೂ (ಇ) ಆಗಿದ್ದರೆ, ನಿಮಗೆ ನಿಮ್ಮ ಮಕ್ಕಳೊಂದಿಗೆ ಮಾತನಾಡಿ ಅರ್ಥಮಾಡಿಕೊಳ್ಳಲು ಯಾವ ತೊಡಕೂ ಇಲ್ಲ. ಉತ್ತರಗಳು (ಅ) ಅಥವಾ (ಆ) ಆಗಿದ್ದರೆ, ತ್ವರೆಯಿಂದ ನಿಮ್ಮ ಪುತ್ರ ರತ್ನ ಯಾ ಪುತ್ರಿ ರತ್ನಳನ್ನು ಪುಸಲಾಯಿಸಿ ಒಂದು ತಿಂಗಳ ಕಾಲ ಅವರ ಭಾಷೆಯನ್ನು ಕಲಿಯಿರಿ. **Good Luck !**

ವೃತ್ತಿಯ ಶ್ಲೇಷೋಕ್ತಿ

ಕಮಲಾ ರಾಮಸ್ವಾಮಿ

"ಹಲೋ, ಹಲೋ! ಚೀಫ್ ಇಂಜಿನಿಯರ್ ರಾವ್ ಅವ್ರ ಮನೇನಾ?"

"ಹೌದು. ಯಾರು ಬೇಕಿತ್ತು?"

"ಮಿಸೆಸ್ ರಾವ್ ಹತ್ರ ಮಾತನಾಡಬೇಕಾಗಿತ್ತು"

"Please hold the line"

ಮಗಳಿರಬೇಕು! ಎಳೆಯ ಧ್ವನಿ.

"ಯಾರೂ?" ಕೋಮಲಮ್ಮನ ಕೋಕಿಲವಾಣಿ ಉಲಿಯಿತು.

"ನಾನು ಕಣೆ ಸೀತಾ! ಪಂಕಜ, ಸುಲೋ, ಸುಶೀ, ನಾನು ಎಲ್ಲಾ ಸೇರಿ ಮಧ್ಯಾಹ್ನ ಸಿನಿಮಾಗೆ ಹೊಗೋಣ ಎಂದುಕೊಂಡ್ವಿ. ನೀನು ಬರ್ತೀಯಾ?"

"ಓಹೋ! ಖಂಡಿತ ಬರ್ತೀನಿ. ಎಲ್ರ ಜೊತೆ ಹೋಗಿ ಎಷ್ಟೋ ದಿನ ಆಯ್ತು. ಅದ್ಸರಿ, ಯಾವ ಪಿಕ್ಚರ್?"

"Tender is the Night. M. G. Road ನಲ್ಲಿ...."

"ಅಯ್ಯಪ್ಪಾ! ನಾನು ಬರುಲ್ಲಾಮ್ಮಾ" ತಟ್ಟನೆ ನಿರುತ್ಸಾಹದ ನಕಾರ.

"ಯಾಕೆ? ಏನಾಯ್ತು ನಿಂಗೆ. ಈಗ ತಾನೇ ಬರ್ತೀನಿ ಅಂದೆ. Sudden ಆಗಿ..."

"ಅಮ್ಮಮ್ಮಾ! ನಂಗಂತೂ ಸಾಕಾಗಿದೆ. ಇವರ ಮಾತೆಲ್ಲಾ ಬರಿಯ ಟೆಂಡರ್ ಗಳೇ. ಈ Tender ಇವತ್ತು Open. ನಾಳೆ ಆ ಪೇಪರ್‌ಗೆ Tender notice ಕೊಡಬೇಕು ಅಂತ ಸದಾ ಮನೇಲಿ ಅದೇ ಮಾತು. ನಂಗಂತೂ ಸಾಕಾಗಿದೆ, Tender ವಿಚಾರ. ನೀವೆಲ್ಲಾ ಹೋಗಿ ಬನ್ನಿ. Have a nice time, bye" ಇಟ್ಟೆ ಬಿಟ್ಟಳು ಕೋಮಲ.

ಅಲ್ಲಾ ! English optional ಆಗಿ ತಗೊಂಡು Second class ನಲ್ಲಿ ಪಾಸ್ ಮಾಡಿದ ಕೋಮಲಾಗೆ ಭಾಷೆ ಪರಿಜ್ಞಾನ ಇಷ್ಟೊಂದು ಸೀಮಿತವಾಗಲು ಸಾಧ್ಯವೆ ? ಅದೂ ತನ್ನ ಗಂಡನ ವೃತ್ತಿಯನ್ನು ಅವಲಂಬಿಸಿ.... ಪಾಪ Tender ಅಂದ್ರೆ ಮೃದು, ಕೋಮಲ ಎನ್ನುವುದೂ ಮರ್ರು ಹೋಗಿದೆ ಅವ್ಳಿಗೆ.

* * *

"ಗೊತ್ತಾ ಕಣೆ ರಜಾ ಬಂದಿದೆ ಅಂತ. ಮೂರು ತಿಂಗ್ಳಿಂದ ಒಂದೇ ಸಮ್ನೆ ಈ ಮಾತ್ನೆ ಹೇಳ್ತಾ ಇದ್ದೀ. ಹೋಗೋಣ ಎಲ್ಲಾದ್ರೂ ಸುತ್ತಾಡಿಕೊಂಡು ಬರೋಣ. ಬರೀ ನಾವು ನಾವೇ ಹೋದರೆ ಮಜಾ ಇರುಲ್ಲ ಕಣೆ. ಜೊತೆಗೆ ಯಾರಾದ್ರೂ ಫ್ರೆಂಡ್ಸ್ ಬಂದ್ರೆ ಚೆನ್ನಾಗಿರುತ್ತೆ. ನಾವಂತೂ ಹೋಗೋದು ಖಂಡಿತ. ಈಗ ತಾನೇ ರಾಂಚಿಯಿಂದ ರಿಟೈರ್ ಆಗಿ ಬಂದಿದ್ದಾನೆ ಅನಂತು! ಅವನ್ನೂ ಅವ್ನ ಹೆಂಡ್ತೀನೂ ಯಾಕೆ ಕರೀಬಾರ್ದು"

"ಹೌದ್ರೀ. ಖಂಡಿತ ಕರೀರಿ. ಆಕೆನೂ ಈ ಊರಿಗೆ ಬಂದ ಮೇಲೆ ಎಲ್ಲೂ Outingಗೇ ಹೋಗಿಲ್ಲ ಅಂತಿದ್ರು. ಪಾಪ ! ಅವ್ರಿಗೂ ಬೇಜಾರು"

"ಅವ್ರ ನಂಬರ್ ಏನು ? 222444 ಅಲ್ವೆ ?"

"222444. ಅನಂತೂನಾ ಮಾತಾಡ್ತಾ ಇರೋದು ?"

"ಯಾರೂ ಸೋಮುನಾ ! ಏನೋ ಏನು ಸಮಾಚಾರ ?"

"ಏನಿಲ್ಲಾ. ಮಕ್ಕಳಿಗೆಲ್ಲಾ ರಜಾ ಬಂದಿದೆ. ಎಲ್ಲಾದ್ರೂ ಸುತ್ತಾಡಿಕೊಂಡು ಬರೋಣ ಅಂತ. ಮನೇಲಿ ಬೇಜಾರು ಅಂತ ಗಲಾಟೆ ಮಾಡುತ್ವೆ. ನೀನೂ, ನಿನ್ನ ಮಿಸೆಸ್ ಬರ್ತೀರಾ ಅಂತಾ."

"ಖಂಡಿತ ಬರ್ತೀವಿ ಸೋಮೂ. ನಾವಂತೂ Ready, ಆದ್ರೆ ಎಲ್ಲಿಗೆ ಹೋಗುತ್ತಿದ್ದೀರಿ?"

"ನಮ್ಮಣ್ಣನ Estateಗೆ ಹೋಗೋಣ. ಅಲ್ಲಿಂದ 10 ಕಿ.ಮೀ. ದೂರದಲ್ಲಿ ಸೈಬೀರಿಯನ್ ಕ್ರೇನ್ಸ್ ಬಂದಿದೆಯಂತೆ. ಹಾಗೇ ನೋಡಿಕೊಂಡು ಬರೋಣ".

"ಸೋಮು, Sorry. ನಂಗಂತೂ ಎಲ್ಲಾ ತರಹ Cranes ನೋಡಿ ಸಾಕಾಗಿದೆ. Germany Russia ಎಲ್ಲಾ ಕಡೆ ಹೋಗಿ ಬರೀ Cranes operation ನಲ್ಲೇ Specialise ಮಾಡಿಕೊಂಡೆ. ಇನ್ನು ಅದರ ತಂಟೆ ಬೇಡ. ನೀವೂ, ಮಕ್ಕಳೂ ಹೋಗಿ ಬನ್ನಿ. Educative ಆಗಿರುತ್ತೆ."

Crane, ಅಂದ್ರೆ ಕೊಕ್ಕರೆ, ಬಕ, ಎಂಬ ಅರ್ಥವೂ ಇದೆ ಎನ್ನುವುದೂ ಅನಂತುಗೆ ಮರ್ರು ಹೋಗಿದೆ.

ನಾನು ಹೋದಾಗ ಮಾವನ ಮನೆಗೆ

ಎಚ್. ಡುಂಡಿರಾಜ್

ನಾನು ಹೋದಾಗಲೂ ಮಾವನ ಮನೆಗೆ ರಾತ್ರಿಯಾಗಿತ್ತು
ಎಂದಿನ ಹಾಗೆ ಅಂದೂ ಕೂಡಾ ಕರೆಂಟು ಹೋಗಿತ್ತು
ರಿಕ್ಷಾದಿಂದ ಇಳಿದೆ ಮನೆಯೆದುರು ಅಳಿಯನ ಗತ್ತಲ್ಲಿ
ಹತ್ತು ರೂಪಾಯಿ ಕೊಟ್ಟು ಹೇಳಿದೆ. "ಚಿಲ್ಲರೆ ನಿನಗಿರಲಿ"
ರಿಕ್ಷಾವಾಲ ಕಣ್ಣು ಕೆಕ್ಕರಿಸಿ–"ಇದು ರಾತ್ರಿಯ ಹೊತ್ತು
ಇನ್ನೂ ಹತ್ತು ಕೊಡಿರಿ" ಎಂದ. ತೆತ್ತೆನು ಬೇಸತ್ತು.

ಹೆಣಭಾರದ ಸೂಟ್‌ಕೇಸನು ಹೊತ್ತು ಮೆಟ್ಟಿಲು ಹತ್ತಿದೆನು
ಮೂರನೆ ಮಹಡಿ ಮಾವನ ಫ್ಲಾಟಿನ ಗುಂಡಿ ಒತ್ತಿದೆನು
ಎಷ್ಟು ಕಾದರೂ ತೆರೆಯದು ಬಾಗಿಲು ಕೆಂಪಾಯಿತು ಕಣ್ಣು
ಕಾಯಿಸಬಹುದ ಬಾಗಿಲ ಹೊರಗೆ ಅಳಿಯ ದೇವರನ್ನು ?
ನನಪಾಯಿತು ಛೇ ಕರೆಂಟು ಹೋಗಿದೆ ಬೆಲ್ಲಾಗುವುದಿಲ್ಲ
ಬಡಿದೆನು ಬಾಗಿಲ ಗೆಜ್ಜೆದನಿಗೆ ಕಿವಿಯಾಗಿಸಿ ಮೈಯೆಲ್ಲ.

"ಯಾರು?" ಎಂದಿತು ಅತ್ತ ಕಡೆಯಿಂದ ಕರ್ಕಶ ದನಿಯೊಂದು
ದನಿಯ ಮೂಲಕವೆ ಗೊತ್ತಾಯಿತು ಅದು ಅತ್ತೆಯದೆ ಎಂದು
ಎಂಜಲು ನುಂಗಿ ರಾಜ ಠೀವಿಯಲಿ "ನಾನು" ಎಂದೆನು ನಾನು
ಬಾಗಿಲು ತೆರೆದವ ಎದೆಗೇ ಹಿಡಿದ ಜೋಡುನಳಿಗೆ ಗನ್ನು !
ಅದದ್ದಿಷ್ಟೆ ಕತ್ತಲಿನಲ್ಲಿ ದಾರಿ ತಪ್ಪಿದ್ದೆ
ಪಕ್ಕದ ಸಬ್‌ಇನ್ಸ್‌ಪೆಕ್ಟರ ಫ್ಲಾಟಿನ ಬಾಗಿಲು ತಟ್ಟಿದ್ದೆ.

ವಿಷಯ ತಿಳಿದಾಗ ಅವರೂ ನಕ್ಕರು–"ಪರವಾಗಿಲ್ಲ ಬಿಡಿ.
ಇದೂ 'ಮಾವನ ಮನೆ'ಯೇ ಎಂದರು ಮೀಸೆ ಹುರಿ ಮಾಡಿ
ನಾನು ಹೋದಾಗ ಮಾವನ ಮನೆಗೆ ರಾತ್ರಿಯಾಗಿತ್ತು
ಎಂಬೀ ಕವಿತೆ ಮುಗಿಸುವ ಮುನ್ನ ಒಂದು ಕಿವಿಮಾತು
ನೀವೂ ಹೋದರೆ ಮಾವನ ಮನೆಗೆ ರಾತ್ರಿ ಹೊತ್ತಿನಲ್ಲಿ
ಮಾವನ ಮನೆಯೇ ಹೌದು ಎಂಬುದ ಖಾತ್ರಿ ಮಾಡಿಕೊಳ್ಳಿ.

(ವಿ. ಸೂ: ಈ ಕವಿತೆಗೆ ಕೆ.ಎಸ್.ನ. ರ ಹಾಡು ಪ್ರೇರಣೆ ಅಲ್ಲ ಅಂತ ಸುಳ್ಳು ಹೇಳುವುದಿಲ್ಲ.)

20

ಜೀನಾ

ಲೀಲಾ ಮಿರ್ಲೆ

ಒಂದು ದಿನದ ಮಟ್ಟಿಗೆ ಜೀನಾ ನಮ್ಮ ಅತಿಥಿಯಾಗಿದ್ದಳು. ಜೀನಾ ಅಮೇರಿಕನ್. ಅಮೇರಿಕಾದಲ್ಲೇ ನೆಲೆಸಿರುವ ನನ್ನ ಗೆಳತಿ ವಿನಿತಳ ಸ್ನೇಹಿತೆ ಜೀನಾ. ಹಾಗಾಗಿ ಜೀನಾ ಭಾರತ ದರ್ಶನವನ್ನು ಕೈಗೊಂಡಾಗ, ಅವಳಿಗೆ ಬೆಂಗಳೂರಿನಲ್ಲಿ ನಮ್ಮಲ್ಲಿ ನಿಲ್ಲುವಂತೆ ವಿನಿತಾ ಹೇಳಿದ್ದಳು.

ಸರಿ, ಜೀನಾ ಬಂದಿಳಿದಳು. ವಿನಯ, ಸೌಜನ್ಯಗಳಿಂದ ಕೂಡಿದ ಅವಳು ತುಂಬ ಸರಳ ಸ್ವಭಾವದವಳಂತೆ ಕಂಡಳು. ನಮ್ಮ ಸಂಪ್ರದಾಯ, ಜೀವನದ ಬಗ್ಗೆ ತಿಳಿದುಕೊಳ್ಳಲು ಎಲ್ಲಿಲ್ಲದ ಕುತೂಹಲ.

ಜೀನಾ ಬರುತ್ತಿದ್ದ ಹಾಗೆ ನೆರೆಹೊರೆಯವರಿಗೆಲ್ಲಾ ಏನೊ ಸಂಭ್ರಮ. ನನ್ನ ಮಗ ಅಮೇರಿಕದಲ್ಲಿ ಓದುತ್ತಿರುವುದರಿಂದ, 'ಇವಳು ನನ್ನ ಭಾವಿ ಸೊಸೆಯೇ' ಇರಬೇಕೆಂದು ಅವರ ಗುಮಾನಿ. ಯಾವುದೊ ನೆವ ಮಾಡಿಕೊಂಡು ಒಬ್ಬೊಬ್ಬರಾಗಿ ಬಂದು ಹೋಗಲು ಶುರುಮಾಡಿದರು. 'ಯಾರು ಹುಡುಗಿ, ಚೆನ್ನಾಗಿದಾಳೆ' ಎಂದರು ವಿಶಾಲಾಕ್ಷಮ್ಮ. 'ಯಾವ ದೇಶದವರಾದರೇನು. ಗುಣ ಮುಖ್ಯ' ಎಂದರು ಕಲಾವತಿ. 'ವಿದೇಶಕ್ಕೆ ಹೋದ ಮೇಲೆ ಇದೆಲ್ಲಾ ಸರ್ವೆ ಸಾಮಾನ್ಯ' ಎಂದು ಸಮಾಧಾನ ಮಾಡಿದರು ಗಂಗೂಬಾಯಿ. ಅವರುಗಳಿಗೆ ಬಿಟ್ಟಿ ಎಂಟರ್ ಟೇನ್‌ಮೆಂಟ್ ಒದಗಿಸಿದ ನಾನು, ಎಲ್ಲಕ್ಕೂ 'ಹೂಂ' ಎಂದು ಸಸ್‌ಪೆನ್ಸ್‌ನಲ್ಲಿಟ್ಟೆ ಎಲ್ಲರನ್ನೂ !

ಇವರ ಮಾತು ಅರ್ಥವಾಗದ ಜೀನಾ 'How interesting. Very friendly people' ಎಂದಳು.

ಒಂದು ಹಗಲಲ್ಲಿ ಇವಳಿಗೆ ಏನೇನು ತೋರಿಸೋದು ತಿಳಿಯಲಿಲ್ಲ. ಅವಳನ್ನೇ ಕೇಳಿದೆ. ಹಳೇ ಕಾಲದವರ ಮನೆ. ಹಾಗೂ ಟಿಪಿಕಲ್ ಅಂಗಡಿ ಬೀದಿಯನ್ನು ನೋಡಲು ಇಷ್ಟಪಟ್ಟಳು ಜೀನಾ. ಸಪ್ಪೆ ತಿಂಡಿ, ಕಾಫಿಗಳ ನಂತರ, ಇನ್ನೊಂದು ಅರ್ಧ ಗಂಟೆಗೆ ಹೊರಡೋಣ ಅಂದೆ.

ನಾನು ನಮ್ಮ ಯಜಮಾನರು ಹಾಲಿನಲ್ಲಿ ಕುಳಿತಿದ್ದೆವು. ಜೀನಾ ಲಂಗ, ರವಿಕೆ ತೊಟ್ಟು ಕೈಯಲ್ಲಿ ಸೀರೆ ಹಿಡಿದು ಅಲ್ಲಿಗೆ ಬಂದಳು. ಮಲಯಾಳಂ ಮೂವಿಯಿಂದ ಎದ್ದು ಬಂದ ನಾಯಕಿಯಂತಿದ್ದ ಅವಳನ್ನು ನೋಡಿ ನಮ್ಮವರು ನಾಚಿ ರೂಮಿಗೆ ಓಡಿದರು. ಗಾಭರಿಯಿಂದ ಜೀನಾ "Why why" ಎಂದಳು. "Nothing Nothing" ಎಂದೆ ನಾನು. ಸೀರೆ ಉಡಿಸಲು ಸಹಾಯ ಕೇಳಿದಳು. 'I'd like to go shopping dressed like a typical Indian ಎಂದಳು. ಸರಿಯಮ್ಮ ಸರಿ, ಇನ್ನೇನು ಅನಾಹುತ ಕಾದಿದೆಯೊ ಅಂತ ಹೆದರಿಕೊಂಡೇ ಅವಳಿಗೆ ಸೀರೆ ಉಡಿಸಿದೆ.

ಅಂಗಡಿ ಬೀದಿಗೆ ಹೊರಟೆವು. ಶುರುವಿನಲ್ಲೆ ಸೀರೆ ನಿರಿಗೆ ತೊಡರಿ ಮುಗ್ಗರಿಸಿದಳು. ಸಧ್ಯ ಪೆಟ್ಟಾಗಲಿಲ್ಲ. ಅದಾದ ನಂತರ ಸೀರೆಯನ್ನು ಮಂಡಿಯ ತನಕ ಎತ್ತಿ ಹಿಡಿದುಕೊಂಡು, ಜಾರುತ್ತಿದ್ದ ಸೆರಗನ್ನು ಕಂಕುಳಲ್ಲಿ ಸಿಕ್ಕಿಸಿಕೊಂಡು, ಬೀದಿ ಮಧ್ಯದಲ್ಲಿ ನಡದೇ ಬಿಟ್ಟಳು ಜೀನಾ !

ನನಗೊ ಅವಳ ಜೊತೆ ನಡೆಯಲೂ ಸಂಕೋಚವಾಗುತ್ತಿತ್ತು. ಅಲ್ಲಾ, ಯಾಕೀ ಆಟಗಳು. ನಮ್ಮ ಹಿಂದೂ ಸಂಪ್ರದಾಯಸ್ಥ ಹುಡುಗಿಯರ ತರಹ ಜೀನ್ಸ್, ಟಿ ಶರ್ಟ್ ತೊಟ್ಟು ಬರಬಾರದಾಗಿತ್ತೇ ಅಂತ ರೇಗಿತು.

ಬಳೆ ಅಂಗಡಿಯಲ್ಲಿ ಚರ್ಕಿ ಸಾಣೆ ಬಳೆ ಅವಳನ್ನು ಆಕರ್ಷಿಸಿತು. 'I' ll buy one bangle' ಎಂದಳು. 'ಒಂದು ಮಾರಲ್ಲ' ಎಂದೆ. 'O.k, I' ll buy three' ಎಂದಳು ! ಬಳೆ ಕೊಳ್ಳುವ ರೀತಿಯನ್ನು ತಿಳಿಸಿ, ಬಳೆ ಕೊಡಿಸಿದ್ದಾಯಿತು. ಫುಟ್‌ಪಾತಿನ ಮೇಲೆ ಮಾರುತ್ತಿದ್ದ ಹಾಳೂ ಮೂಳೂ ಎಲ್ಲಾ ಅವಳಿಗೆ 'Wonderful' ಆಗೇ ಕಂಡವು. ಕಂಡಾಬಟ್ಟೆ ಫೋಟೊ ತೆಗೆಗ್ತು ನಂತರ ಆ ಸೆಶನ್ ಮುಗಿಯಿತು.

ಇನ್ನು ಹಳೆ ಕಾಲದ ಮನೆಯನ್ನು ನೋಡಲು ಇಷ್ಟಪಟ್ಟ ಜೀನಳನ್ನು ನಮ್ಮ ಅಜ್ಜಿಯ ಮನೆಗ ಕರೆದುಕೊಂಡು ಹೋದೆ. ಅಜ್ಜಿ ಮನೆ ಹಳೇ ಕಾಲಕ್ಕೆ ಸೇರಿದ್ದು ಎನ್ನಬಹುದು. ಹಾಲಿನಲ್ಲಿ ಚಾಪೆ, ಮಣಿ ತೋರಣ, ಗೋಡೆ ಭರ್ತಿ ಫೋಟೊಗಳು ರಾರಾಜಿಸುತ್ತಿವೆ. ಸದಾ ಕಿಟಕಿಯನ್ನು ಮುಚ್ಚಿರುವುದರಿಂದ ಕತ್ತಲು ಬೇರೆ. ಇದು ಒಂದು ತರಹ Atmosphere ಒದಗಿಸುತ್ತದೆ. ನಮ್ಮ ಅಜ್ಜಿಯ ಸೂಕ್ಷ್ಮ ಪರಿಚಯವನ್ನು ಮಾಡಿಕೊಡಲೇ ಬೇಕು. ಬ್ರಿಟಿಷರು ಆಳುತ್ತಿದ್ದ ಕಾಲದಲ್ಲಿ ಅವರು ಎಳೆಯರು, ಇಂಗ್ಲಿಷ್ ಬಾರದು. ಆದರೆ ಇಂಗ್ಲಿಷ್ ಕಲಿಯಬೇಕೆಂಬ ಹಂಬಲ ಇನ್ನೂ ಹೋಗಿಲ್ಲ. ಸಮಯ ಸಿಕ್ಕಾಗ ಬರುವ ಒಂದೆರಡು ಇಂಗ್ಲಿಷ್ ಪದಗಳನ್ನು

ಉಪಯೋಗಿಸಿ, ಇಂಗ್ಲಿಷ್‌ನಲ್ಲಿ ಮಾತನಾಡಿದೆ ಎಂಬ ಸಮಾಧಾನವನ್ನು ಹೊಂದು ತ್ತಾರೆ. ಈ ಹಿನ್ನೆಲೆಯಲ್ಲಿ ಅವರ ಮನೆಗೆ ಜೀನಳ ಆಗಮನ.

ಜೀನಾ ಕಾಲು ಚಾಚಿ ಚಾಪೆಯ ಮೇಲೆ ಕುಳಿತಳು. ಅಜ್ಜಿ 'How you are' ಎನ್ನುತ್ತಾ ಸಂಭಾಷಣೆ ಶುರು ಮಾಡಿ, 'What your father salary' 'What your age' 'When marriage' ಮುಂತಾದ ಭಾರತೀಯ ಪ್ರಶ್ನೆ ಗಳನ್ನು ಕೇಳಲಾರಂಭಿಸಿದರು. ಸಧ್ಯ ಅಜ್ಜಿಯ Accent ಅವಳಿಗೆ ಅರ್ಥವಾಗ ಲಿಲ್ಲ. ನಾನು "ನಿಮ್ಮ ತಂದೆಯ ಯೋಗಕ್ಷೇಮ ವಿಚಾರಿಸಿದರು. ಈ ಸಣ್ಣ ವಯಸ್ಸಿನಲ್ಲೇ ನಮ್ಮ ದೇಶದ ಬಗ್ಗೆ ತಿಳಿದುಕೊಳ್ಳುವ ನಿನ್ನ ಕುತೂಹಲವನ್ನು ಕಂಡು ಅವರಿಗೆ ತುಂಬ ಸಂತೋಷವಾಗಿದೆ" ಎಂದೆಲ್ಲಾ ಉಢಾಫೆ ಹೊಡೆದು, ಬೇಗ ಮನೆಗೆ ಕರೆದುಕೊಂಡು ಬಂದೆ.

ಇದ್ದ 24 ಗಂಟೆಯಲ್ಲಿ ನಮ್ಮ ನಡೆ ನುಡಿ, ಸಂಪ್ರದಾಯಗಳ ಬಗ್ಗೆ ಬೇಕಾ ದಷ್ಟು ಕೇಳಿ ತಿಳಿದುಕೊಂಡಳು ಜೀನಾ. ಅವಳು ಹೊರಡುವ ಸಮಯ ಬಂದಾಗ ಜೀನಾ "ಒಂದು ವಿಷಯ ನನಗೆ ಅರ್ಥವಾಗಲಿಲ್ಲ. ನೀವು ಸಂಪ್ರದಾಯಸ್ಥ ಹಿಂದು ಗಳೆಂದು ಹೇಳಿದಿರಿ. ನಿಮ್ಮ ಭಾಷೆ ಮಾತನಾಡುವಾಗ ದೇವರ ಹೆಸರನ್ನು ಜ್ಞಾಪಿಸಿಕೊಳ್ಳುವುದನ್ನು ಗಮನಿಸಿದೆ. ಆದರೆ ಮುಸಲ್ಮಾನ ದೇವರ ಹೆಸರನ್ನು ನೀವು ಪದೇ ಪದೇ ಹೇಳುವುದು ನಿಮ್ಮ ಉದಾರ ಮನೋಭಾವವನ್ನು ತೋರಿಸು ತ್ತದೆ" ಎಂದಳು.

ನನಗೆ ದಿಗ್ಭ್ರಮೆಯಾಯಿತು, ಅನಂತರ ಹೊಳೆಯಿತು. ಭಗವಂತನ ಮಹ ಮದೀಯ ಹೆಸರನ್ನು ಕನ್ನಡದಲ್ಲಿ ಎಷ್ಟು ಬಳಸುತ್ತೀವಿ, ಅಲ್ಲಾ!

❋

ಪುಟ್ಟ ಮಗು ಶ್ರೀಕಾಂತ್ ತಾತನ ತೊಡೆಮೇಲೆ ಕೂತು ಮುದ್ದು ಗರೀತಿತ್ತು. ತಾತಂಗೋ ಇಲ್ಲದ ಹೆಮ್ಮೆ!

"ನೋಡು ಮರಿ, ಈ ಚಿನ್ನದ ಗಡಿಯಾರ ಇದೆಯಲ್ಲಾ, ಇದನ್ನ ನಾ ಸತ್ತ ಮೇಲೆ ನಿನಗೇ ಕೊಡ್ತೀನಿ. ಎಷ್ಟು ಚೆನ್ನಾಗಿದೆ ಅಲ್ಲ ಈ ಗಡಿಯಾರ"

"ಔದು ತಾತ, ಗಡಿಯಾಲ ಚೆನ್ನಾಗಿದೆ. ನೀ ಯಾವಾಗ ಚಾಯ್ತೀಯಾ?"



"ಎಲೆಕ್ಸನ್ ಮುಗಿದ್ ಮ್ಯಾಗೆ ಸಂಪಾದ್ನೆ ಎಂಗೆ ಅಂತೇನ್ ಯೋಸ್ನೆ ಮಾಡ್ಬೇಡ್ ಕಣಪ್ಪೊ. ಇನ್ ಮ್ಯಾಗೆ ನಂ ದೇಸ್ದಾಗೆ ಪ್ರತಿ ವರ್ಸ ಎಲೆಕ್ಸನ್ ಇರ್ತ್ಯಕೆ".



ಕೊರವಂಜಿಯಿಂದ ....

ಗಂಡಾಂತರ ಪ್ರಯೋಗ

—ಕೀಥ

ಶೌರಿ ನನ್ನಲ್ಲಿ ಕೆಲಸಕ್ಕೆ ಸೇರಿದಾಗ ನನಗೂ ಅವನಿಗೂ ಇಷ್ಟು ಪರಸ್ಪರ ಪ್ರೀತಿ ಬೆಳೆಯುತ್ತೆ ಅಂತ ನಾನು ತಿಳಿಯಲಿಲ್ಲ. ನಿಜಕ್ಕೂ ಹೇಳುವುದಾದರೆ ಯಾವ ವಿಷಯದಲ್ಲೇ ಆಗಲಿ ನಾನು ಶೌರಿಯ ಅಭಿಪ್ರಾಯವಿಲ್ಲದೆ ಮುಂದಿನ ಹೆಜ್ಜೆ ಇಡುವುದೇ ಇಲ್ಲ. ಒಂದು ಬಾರಿ ನಾನು ದೇವ್ ಆನಂದ್‌ನಂತಹ ಅಂದರೆ ದೇವ್ ಆನಂದ್ ಹಾಕಿದ್ದಂತಹ ಬುಷ್ ಕೋಟನ್ನು ಬಹಳ ಆಸೆಯಿಂದ ಹೊಲಿಸಿಕೊಂಡೆ. ಅದನ್ನು ನೋಡಿ ಶೌರಿ, "ಇದನ್ನು ಬೀದಿಯಲ್ಲಿ ಹಾಕಿಕೊಂಡು ಹೋಗಬೇಡಿ ಸರ್, ನಿಮಗೊಪ್ಪಲ್ಲ" ಅಂದ. ನಾನು ಕೇಳಲಿಲ್ಲ. ಕಡೆಗೇನಾಯ್ತು? ಮನೆಗೆ ಹಿಂತಿರುಗಿ ಬರುವಾಗ ಸೀದಾ ರಸ್ತೆ ಬಿಟ್ಟು ಕುಂಟಪ್ಪನ ಗಲ್ಲೀ ಮಾರ್ಗ ಹಿಡಿದಿದ್ದಾಯ್ತು. ಹಿಂದೆ ಒಂದು ಸಾರಿ ಕುದುರೆ ರೇಸಿನಲ್ಲೂ ಆಷ್ಟೇ ಪ್ಯಾರೀ ಕಪ್ಪಿನಲ್ಲಿ ಜಹನಾರಾನೇ ಗೆಲ್ಲೋದು ಅಂತ ಸ್ಪಷ್ಟವಾಗಿ ತಿಳಿದಿತ್ತು.

ಶೌರಿ ಹೇಳಿದ: "ಜಹಾನಾರಾ ಬಂದರೆ ಎರಡನೇದಾಗಬಹುದು. ಮೈ ಭೀ ಫೂಲ್ ಗೆಲ್ಲುತ್ತೆ ಸಾರ್, ಖಂಡಿತ" ಅಂತ.

"ಬಿಡೋ ಪೆದ್ದ" ಅಂದೆ.

ಮೈ ಭೀ ಫೂಲ್ ಫಸ್ಟು! ಜಹಾನಾರಾ ಸೆಕೆಂಡ್ ಪ್ಲೇಸು! ಶೌರಿ ಅವತ್ತಿನ ರೇಸಿನಲ್ಲಿ ಒಟ್ಟು ಅರವತ್ತೇಳು ರೂಪಾಯಿ ಗೆದ್ದಿದ್ದ.

"ಶೌರಿ ಇನ್ನು ಮೇಲೆ ಎಲ್ಲಾ ವಿಷಯದಲ್ಲೂ ನೀನೇ ನನಗೆ ಮಾರ್ಗದರ್ಶಿ" ಅಂದೆ.

"ಆಗಲಿ ಸರ್, ಕೈಲಾದ ಮಟ್ಟಿಗೂ ನಿಮಗೆ ತೃಪ್ತಿಪಡಿಸುತ್ತೇನೆ" ಅಂದ.

ಹೆಚ್ಚು ಕಮ್ಮಿ ಹಾಗೇ ನಡೆದುಕೊಂಡು ಬಂದಿದೆ.

ಒಂದು ಬಾರಿ ನನ್ನ ಸ್ನೇಹಿತ ಪಲ್ಲು—ಪ್ರಹ್ಲಾದರಾವ್—ಇದ್ದಕ್ಕಿದ್ದ ಹಾಗೇ ನನ್ನಲ್ಲಿಗೆ ಬಂದ.

"ಪಾಂಡು, ನಾನೊಂದು ಸಂಕಟದಲ್ಲಿ ಸಿಕ್ಕಿ ಬಿದ್ದಿದ್ದೇನೆ. ನೀನಾದರೂ ನನ್ನನ್ನ ಪಾರು ಮಾಡ್ತೀ ಏನೋ ?" ಅಂದ.

ನನಗೆ ಆಶ್ಚರ್ಯವಾಯ್ತು. ಪಲ್ಲು 'ಜನಸಾಕ್ಷಿ'ಯ ಸಂಪಾದಕ. ಚೆನ್ನಾಗಿ ದುಡ್ಡಿದೆ. ಇವನಿಗೇನು ಬಂತು ಕೇಡು ಅಂದುಕೊಂಡೆ. ಆದರೂ,

"ಎಷ್ಟು ಬೇಕಾಗಿತ್ತು ಹೇಳು" ಅಂದೆ.

"ನಿನ್ನ ಹಾಳು ದುಡ್ಡು ಯಾರಿಗಯ್ಯಾ ಬೇಕು ? ನೋಡು ಈ ಸಮಾಚಾರ ತುಂಬಾ ಸೂಕ್ಷ್ಮವಾದದ್ದು."

"ಓಹೋ ! ಪ್ರೇಮಪಾಶದಲ್ಲಿ ಸಿಲುಕಿದ್ದಿ ಏನಯ್ಯ ?"

"ನೀನೇನು ಅಷ್ಟು ಕುಚೇಷ್ಟೆಯಿಂದ ಕೇಳಬೇಕಾಗಿಲ್ಲ. ಆದರೂ ಸಮಾಚಾರ ಅದೇ."

"ಮೋಹಿ.... ಹುಡುಗಿ ಯಾರಪ್ಪಾ ?"

"ಅಗೋ ಆ ಎದುರು ಮನೆ ಗಂಗಾಧರರಾಯನ ಮಗಳು ಶಶಿಕಲಾ."

"ಅಲ್ಲೋ ಪಲ್ಲು, ಗಂಗಾಧರರಾಯ ನಿನಗೇನೋ ಆಗಬೇಕಲ್ವೇನೋ ?"

"ಆದರೆ ಮಾವ ಆಗ್ಬೇಕು. ಈಗ ಸದ್ಯಕ್ಕೆ ಏನೂ ಇಲ್ಲ."

"ಅವರಿಬ್ಬರಿಗೆ ಒಪ್ಪಿಗೆ ಇದೆ ತಾನೇ ?"

"ನಾನು ಒಪ್ಪಿದರೆ ಅಂದರೆ ನನ್ನ ಅಂತರಂಗ ಅವರಿಗೆ ತಿಳಿದರೆ ಆಗುತ್ತೆ."

"ಮತ್ತೇನು ರೋಗ ಬಂದಿರೋದು ನಿಂಗೆ ? ನೇರವಾಗಿ ಗಂಗಾಧರರಾಯನ ಹತ್ತಿರ ಹೋಗಿ ಕೇಳು."

"ನಂಗೆ ಧೈರ್ಯ ಬರೊಲ್ಲ."

ಪಲ್ಲುವಿನ ಸ್ವಭಾವ ಅದು ! ಶುದ್ಧ ಮುಕ್ಕೇಡಿ ! ಆದರೂ ಶಶಿಕಲಾನ ಈ ಪ್ರಾಣಿ ಯಾಕೆ ಬಯಸಿದ್ದಾನೆ ಅಂತ ನನಗೆ ಅರ್ಥವಾಗಲಿಲ್ಲ. ನಾನೋಡಿದ್ದೇನೆ ಶಶಿಕಲಾನ ಉದ್ದಾನೇ ಮುಖ (ಉದ್ದ+ಆನೆ), ಉದ್ದಾನೇ ಮೂಗು ಎರಡು ಜೊತೆ ಚಪ್ಪಲಿಗಳಿಗಾಗುವಷ್ಟು ಚರ್ಮದ್ದು. ಪ್ರಪಂಚವೇ ಹೀಗೆ !

"ಪಲ್ಲು, ನೀನೇನು ಯೋಚಿಸಬೇಡ. ನಮ್ಮ ಶೌರಿ ಹತ್ತಿರ ಈ ವಿಷಯ ಬಿಡೋಣ. ಹುಡುಕೀ ಹುದುಕುತ್ತಾನೆ" ಅಂದೆ.

"ಶೌರಿ."

"ಸರ್" ಅನ್ನುತ್ತ ಬಂದ.

"ನನ್ನ ಸ್ನೇಹಿತರು ಪ್ರಹ್ಲಾದರಾಯರ ವಿಷಯ...."

"ಎಲ್ಲಾ ಗೊತ್ತಾಯ್ತು ಸರ್."

"ಹಾ !" ಅಂದ ಪಲ್ಲು.

"ಏನಿಲ್ಲ ಸರ್. ನೀವಿಬ್ಬರೂ ಇಲ್ಲಿ ಮಾತಾಡ್ತಾ ಇದ್ದಾಗ ಯಜಮಾನರ ರೂಮಿನಲ್ಲಿ ಹೊಸದಾಗಿ ತಂದ ಪಿಂಗಾಣಿ ಬೆಕ್ಕನ್ನು ಒರೆಸ್ತಾ ಇದ್ದೆ. ಸ್ವಲ್ಪ ಕಿವೀಗೆ ಬಿತ್ತು, ಅಷ್ಟೆ" ಅಂದ.

"ಶೌರಿ, ಏನಾದರೂ ಉಪಾಯ ಹುಡಕಬೇಕಲ್ಲ" ಅಂದೆ.

"ಬೇಕಿಲ್ಲ ಸಾರ್. ರೆಡಿಯಾಗಿದೆ."

"ಏನು ಶೌರಿ ಅದು ?"

"ಸ್ವಲ್ಪ ವ್ಯಕ್ತಿಗಳ ಮನಶ್ಶಾಸ್ತ್ರ ಉಪಯೋಗಿಸಿಕೊಂಡರೆ ಕೆಲಸ ಫಲಿಸುತ್ತೆ, ಸಾರ್."

ನಾನು ಪಲ್ಲೂ ಕಡೆ ಹೆಮ್ಮೆಯಿಂದ ನೋಡಿದೆ. ಆದರೆ ಶೌರಿಯ ಮಾತಿನಲ್ಲಿ ಪಲ್ಲೂಗೆ ಏನೇನೂ ಅರ್ಥ ತೋರಿದ್ದಂತೆ ಕಾಣಲಿಲ್ಲ. ನಮ್ಮ ಕಾಲೇಜು ಹುಡುಗರು ಇಂಗ್ಲಿಷ್ ಭಾಷೆಯ ತರಗತಿಯಲ್ಲಿ ಕೂತಿರುವ ಹಾಗೆ ಕೂತಿದ್ದ.

"ವಿವರಿಸಿ ಹೇಳು, ಶೌರಿ" ಅಂದೆ.

"ಇಷ್ಟೆ ಸರ್. ಪ್ರಹ್ಲಾದರಾಯರು ಹೇಗಾದರೂ ಮಾಡಿ ಗಂಗಾಧರ ರಾಯರ ಮತ್ತು ಅವರ ಮಗಳ ಮನಸ್ಸಿನಲ್ಲಿ ಕರುಣೆ ಬರುವ ರೀತಿ ಮಾಡಿದರೆ ಕೆಲಸ ಕೈಗೂಡುತ್ತೆ" ಅಂದ.

"ಏನು ಹೇಳ್ತಿ, ಪಲ್ಲ ?" ಅಂದ.

ಪಲ್ಲು ಯೋಚಿಸಿದ.

ಶೌರಿ ಹೇಳೋದರಲ್ಲಿ ಒಂದು ಥರಾ ಸತ್ಯವಿದೆ.

ಶೌರಿ ತನ್ನ ಯೋಚನೆ. ಯೋಚನೆಯ ಬಗ್ಗೆ ಇನ್ನೂ ಸರಿಯಾಗಿ ಯೋಚನೆ ಮಾಡೋಕೆ ಹೇಳಿ, ನಾನು, ಪಲ್ಲು ಮನೆ ಬಿಟ್ಟೆವು.

ನನಗೇನೋ ಶೌರಿಯ ಮಾತಿನಲ್ಲಿ ಅಷ್ಟಾಗಿ ಭರವಸೆ ಬರಲಿಲ್ಲ. ಹಾಗೂ ಹಿಂದಿನ ದಿನದಿಂದ ನನಗೂ ಅವನಿಗೂ ಒಂದು ಪಿಂಗಾಣಿ ಬೆಕ್ಕಿನ ವಿಷಯದಲ್ಲಿ ಭಿನ್ನಾಭಿಪ್ರಾಯವಿತ್ತು. ನಾನು ಪೇಟೆಯಿಂದ ಬರುವಾಗ ಹರಾಜಿನಲ್ಲಿ ಆ ಪಿಂಗಾಣಿ ಬೆಕ್ಕನ್ನು ಕೊಂಡು ತಂದು ನನ್ನ ಕೋಣೆಯಲ್ಲಿ ಕನ್ನಡಿಯ ಮೇಲೆ ಇಟ್ಟೆ.

"ಹೇಗಿದೆ ಶೌರಿ ?" ಅಂತ ಕೇಳಿದ್ದೆ.

"ಈ ಕೋಣೆಗೆ ಅದು ಒಪ್ಪೊಲ್ಲ ಸರ್" ಅಂದಿದ್ದ.

"ನಿನಗೇನು ಗೊತ್ತು ಈ ವಿಗ್ರಹ ಈ ನಾಡಿನಲ್ಲಿ ಬೇರೊಂದು ಸಿಗೊಲ್ಲ" ಅಂದಿದ್ದೆ.

"ಸರಿ ಸರ್" ಅಂತ ಸುಮ್ಮನಾಗಿದ್ದ.

ಆದ್ದರಿಂದ ಈ ಭಿನ್ನಾಭಿಪ್ರಾಯದ ವಾತಾವರಣದಲ್ಲಿ ಪಲ್ಲು ಹೇಗೆ ಕೊನೆಗಾಣುತ್ತೋ ಅಂತ ಭಯವಾಯ್ತು.

ಮಾರನೆಯ ದಿನ ಬೆಳಿಗ್ಗೆ 'ಜನಸಾಕ್ಷಿ'ಯ ಕಚೇರಿಗೆ ಹೋದೆ. ಸಂಪಾದಕ ಪಲ್ಲು ತಲೆಯ ಮೇಲೆ ಕೈಯಿಟ್ಟುಕೊಂಡು ಕುಕ್ಕುರುಬಡಿದಿದ್ದ ತನ್ನ ಆಫೀಸು ರೂಮಿನಲ್ಲಿ.

"ಏನು ಪಲ್ಲು ?

"ಪಾಂಡು, ಈಗ ನನ್ನ ಮನಸ್ಸೇ ಬೇಸರವಾಗಿದೆ. ಮಾತನಾಡಿಸಬೇಡ" ಅಂದ.

ಯಾರೋ ಕಳುಹಿಸಿದ್ದ ಒಂದು ಕವನವನ್ನು ತಿರಸ್ಕಾರವಾಗಿ ನೋಡುತ್ತ ಅದೇ ದೃಷ್ಟಿಯನ್ನು ನನ್ನ ಕಡೆಗೂ ಹರಿಸಿದ.

"ಏನದು ಪಲ್ಲು ?"

"ಪಾಂಡು, ನಿಂಗೆ ನಮ್ಮ ಹಳೇ ಮೇಸ್ಟು ಹೆಡ್‌ಮಾಸ್ಟರು ಉಗ್ರಸೇನರಾಯ ಜ್ಞಾಪಕವಿದೆಯೇ ?"

ನನಗೆ ಚೆನ್ನಾಗಿ ಜ್ಞಾಪಕವಿದೆ. ಒಂದು ಬಾರಿ ಅವರನ್ನು "ಚೆಂಗೇಜ್ ಖಾನ್! ಅಂತ ಕೂಗಿದ್ದೆ. ನನ್ನನ್ನು ಒಂದೂವರೆ ಮೈಲಿ ಅಟ್ಟಿಸಿಕೊಂಡು ಓಡಿ ಬಂದಿದ್ದರು"

"ಓಹೊ, ಚೆನ್ನಾಗಿದೆ" ಅಂದೆ.

"ನೋಡು, ಪಾಂಡು. ಆ ಮುದಿಗೂಬೆ ಈ ಹಾಳು ಕವನ ಬರೆದಿದ್ದಾನೆ. ಪ್ರತಿ ವಾರ ಇದೇ ಗೋಳು. ನಮ್ಮ ಜನಸಾಕ್ಷಿಯ ಭಾನುವಾರದ ಸಂಚಿಕೆಯಲ್ಲಿ ಆತನ ಕವನಗಳನ್ನು ಹಾಕಿಸಬೇಕು. ಅದೂ ಹೋಗಲೀಂತ ಎರಡು ಮೂರು ವಾರಗಳಿಂದ ಹಾಕಿದೆ. ಅದು ಸಾಲದಂತೆ ಮುಂದಿನ ಹಾಳೆಯಲ್ಲಿ ದಪ್ಪಕ್ಷರದಲ್ಲಿ ಹಾಕಬೇಕಂತೆ. ಆ ಕವನಗಳನ್ನು ಪ್ರೇತಗಳು ಕೂಡ ಓದಲಿಕ್ಕೆ ಹಿಂಜರಿದಾವು !"

"ಹಾಕಬೇಡ, ಅಷ್ಟೆ !"

"ನಿಂಗೊತ್ತಿಲ್ಲ ಪಾಂಡು....ಪಾಂಡು ! ಆಗೋ ಆ ಉಗ್ರ ಗೂಬೇನೇ ಬಂದ. ನೀ ಓಡು, ಹೂ ! ಬನ್ನಿ ಸರ್, ಕೂಡಿ ಸರ್."

ನಾನು ಬೆವರುತ್ತ ಪಕ್ಕದ ಕೋಣೆಗೆ ಹೋಗಿ ಕುಳಿತೆ. ಉಗ್ರಸೇನರಾಯ ಪಲ್ಲು ಎದುರಿಗೆ ಕುಳಿತ.

"ಏನಯ್ಯ ಪ್ರಹ್ಲಾದ ನನ್ನ ಕವನ ಬಂತೆ ?"

"ಬಂತು ಸರ್. ಅದೇ ಓದ್ತಾ ಇದ್ದೆ. ಬಹಳ ಚೆನ್ನಾಗಿದೆ ಸರ್"

"ಈ ಸಾರಿಯಾದ್ರೂ ಅದನ್ನ ನಿನ್ನ ಪೇಪರಿನಲ್ಲಿ ಮುಂದಿನ ಹಾಳೇಲಿ ಹಾಕ ಬೇಕು ಮತ್ತು ಕೆಳಗೆ ನನ್ನ ಪೂರ್ತಿ ಹೆಸರು 'ಶ್ರೀ ಕರಡಿ ಉಗ್ರಸೇನರಾಯರು, ಮಾಜೀ ಪ್ರೌಢಶಾಲಾ ಪ್ರಾಧ್ಯಾಪಕರು' ಅಂತ ಪ್ರಕಟಿಸಬೇಕು ತಿಳೀತೆ ?"

"ಆಗಲಿ ಸರ್" ಅಂದ ದೈನ್ಯದಿಂದ.

ನಾನು ಹೊರಗೆ ಬಂದೆ. ಪಲ್ಲು ವಿಷಯ ನಿಜವಾಗಿ ಶೋಚನೀಯ ! ಈ ರೀತಿ ತನ್ನ ಹಳೇ ಹೆಡ್‌ಮಾಸ್ಟರ ಮುಂದೆ ಸುಸ್ತು ಹೊಡೆಯುವ ಮುಟ್ಠಾಳ ತನ್ನ ಭಾವೀ ಮಾವನ ಮುಂದೆ ಹೇಗೆ ತಾನೇ ನಿಂತಾನು ! ಹಾಗೇ ಮನೆಗೆ ಬಂದೆ. ಹಾದಿಯಲ್ಲಿ ನನಗೆ ಜ್ಞಾನೋದಯವಾಯ್ತು. ಪಲ್ಲು ಮತ್ತು ಉಗ್ರ ಸೇನರಾಯರ ನಡುವೆ ವ್ಯವಹಾರವನ್ನು ಸರಿಪಡಿಸಿದರೆ ಎಲ್ಲವೂ ಸರಿಹೋಗುತ್ತೆ. ಉಗ್ರಸೇನರಾಯನನ್ನು ಗೆದ್ದ ವೀರ ಪಲ್ಲು, ಗಂಗಾಧರರಾಯನನ್ನು ಒಲಿಸಿದಂತೆಯೇ !

"ಶೌರೀ."

"ಸರ್."

"ಪ್ರಹ್ಲಾದರಾಯರ ವಿಷಯದಲ್ಲಿ ನೀನೇನೂ ಯೋಚಿಸಬೇಕಾಗಿಲ್ಲ. ನಾನೇ ಸರಿಪಡಿಸಬಲ್ಲೆ."

"ಆಗಲಿ ಸರ್...."

"ಹೇಗೆ ಗೊತ್ತೆ ?"

"ಇಲ್ಲ ಸರ್, ಹೇಳಿ."

"ಇವತ್ತು ಪಲ್ಲು ಆಫೀಸಿನಲ್ಲಿ ಅವನಿಗೂ ಉಗ್ರಸೇನರಾಯನಿಗೂ ನಡೆದ ಸಂಭಾಷಣೆಯಲ್ಲಿ ಪಲ್ಲುವಿನ ಗುಟ್ಟು ತಿಳಿದ್ಹೋಯ್ತು, ಶೌರಿ. ಹೇಗಾದರೂ ಮಾಡಿ ಪಲ್ಲು ಉಗ್ರಸೇನನ್ನ ಗೆಲ್ಲೋ ಹಾಗೆ ಮಾಡಬೇಕು. ಆಮೇಲೆ ಅವನು ಗಂಗಾಧರನ್ನ ಒಲಿಸಬಹುದು. ಇದೂ ಮನಶ್ಶಾಸ್ತ್ರ, ಶೌರಿ" ಅಂದೆ ಹೆಮ್ಮೆಯಿಂದ.

"ಆದರೆ...."

"ಆದರೆ ಗೀದರೆ ಬೇಡ. ಎಲ್ಲಿ ಕಾಫಿ ತಾ."

ಕಾಫಿ ಕುಡಿಯುತ್ತ ನನ್ನ ಮನಶ್ಶಾಸ್ತ್ರ ಪ್ರಯೋಗಕ್ಕೆ ಸ್ಫೂರ್ತಿ ಕೊಟ್ಟೆ ನನ್ನ ಅನುಭವದಲ್ಲಿ ನಾವು ತುಸು ಭಯಂಕರ ಮನುಷರನ್ನು ಯಾವುದಾದರೂ ಹೀನವಾದ ಅವಸ್ಥೆಯಲ್ಲಿ ಕಂಡರೆ ನಮಗೆ ಅವರಲ್ಲಿರುವ ಭಯ ಮತ್ತು ಗೌರವ ಕಡಿಮೆ ಆಗೇ ಆಗುತ್ತೆ. ಒಂದು ವೇಳೆ ಉಗ್ರಸೇನರಾಯನನ್ನು ಆ ರೀತಿಯ ಅವಸ್ಥೆಗೆ ಒಳಪಡಿಸಿದರೆ ಪಲ್ಲು ಅದನ್ನು ನೋಡಿದರೆ ಪಲ್ಲುಗೆ ಆತನಲ್ಲಿ ಭಯ' ಗೌರವ ಎಲ್ಲಾ ಇಳಿದು ಹೋಗುತ್ತೆ. ನಮ್ಮ ಶಾಲೆಯಲ್ಲಿ ನಮ್ಮ ಡ್ರಿಲ್ ಮಾಸ್ಟರು ಜಾರಿ ಸಗಣಿ ಮೇಲೆ ಬಿದ್ದಾದಂದಿನಿಂದ ನಮಗೆ ಅವರನ್ನು ಕಂಡರೆ ಭಯವೇ ಇದ್ದಿರಲಿಲ್ಲ. ಇದೇ ಉಪಾಯ ಈಗ ಪ್ರಯೋಗಿಸಿದರೆ ?.... ನನ್ನ ಕಾರ್ಯ ಕ್ರಮ ನಿರ್ಧರಿಸಿಬಿಟ್ಟೆ.

ಒಂದು ಸೇರು ರಂಗೋಲೆ ಹಿಟ್ಟನ್ನು ಒಂದು ಚೀಲದಲ್ಲಿ ಕಟ್ಟಿ ಪಲ್ಲು ಆಫೀಸ್ ಕೋಣೆಯ ಬಾಗಿಲ ಮೇಲೆ ತಲೆಕೆಳಗಾಗಿ ಕಟ್ಟುವುದು. ಉಗ್ರಸೇನರಾಯ ಸದಾ ಅದೇ ಬಾಗಿಲಿಂದ ಒಳಗೆ ನುಗ್ಗುವ ವಾಡಿಕೆ. ಪಲ್ಲುಗೆ ಮಾತ್ರ ಯಾವಾಗಲೂ

ಪಕ್ಕದ ಕೋಣೆಗೆ ಬಂದು ತನ್ನ ಹ್ಯಾಟನ್ನು ಅಲ್ಲಿ ಬಿಸಾಡಿ, ತನ್ನ ಕೋಣೆಗೆ ಹೋಗುವ ಅಭ್ಯಾಸ. ಆದ್ದರಿಂದ ಉಗ್ರಸೇನರಾಯ ಅಲ್ಲಿಗೆ ಪುನಃ ಬರುವ ಹೊತ್ತಿಗೆ ಆ ಚೀಲ ಅಲ್ಲಿ ನೇತುಬಿದ್ದಿದ್ದರೆ ಅದಕ್ಕೆ ಉಗ್ರಸೇನನ ಹಳೇ ಟೋಪಿ ತಗುಲಿ (ಅದು ಸ್ವಲ್ಪ ಸದಿಲವಾಗೇ ಕಟ್ಟಿರುತ್ತೆ) ಬಿಚ್ಚಿ ಹೋಗಿ ರಂಗೋಲೆಯೆಲ್ಲಾ ಆತನ ಮೇಲೆ ಧಾರೆಯಾಗುತ್ತೆ. ಈ ಅವಸ್ಥೆಯಲ್ಲಿ ಉಗ್ರಸೇನರಾಯ ತನ್ನ ಹಿಂದಿನ ಹೆಡ್‌ಮಾಸ್ಟರಾಗಿದ್ದರೆ ತಾನೆ ಏನು ? ಪಲ್ಲುಗೆ ಹೇಗೆ ತಾನೆ ದಬಾಯಿಸಿಯಾನು ? ಪಲ್ಲುಗೆ ಸ್ವಲ್ಪ ತಯಾರಿ ಕೊಟ್ಟರೆ....

ಶೌರಿಗೆ ನನ್ನ ಪಿತೂರಿಯನ್ನು ಹೇಳಿದೆ.

"ನಿಮ್ಮದು ಸ್ವಲ್ಪ ಗಂಡಾಂತರ ಪ್ರಯೋಗ ಸರ್" ಅಂದ.

"ಕೆಲಸ ಸಾಧಿಸಬೇಕಾದರೆ ಗಂಡಾಂತರ ಪ್ರಯೋಗ ಉಪಯೋಗಿಸಬೇಕು, ಶೌರಿ" ಅಂದೆ.

"ಸರಿ ಸರ್" ಅಂತ ಸುಮ್ಮನಾದ.

ಶೌರಿಯ ಸಮ್ಮತದಲ್ಲಿ ಹುಮ್ಮಸ್ಸಿರಲಿಲ್ಲ. ಆದರೂ ನನ್ನ ಪ್ರಯೋಗ ಯಶಸ್ವಿಯಾದ ಮೇಲೆ ಅವನಿಗೇ ತಿಳಿಯುತ್ತೆ ಮತ್ತು ನಾನು ತಂದ ಪಿಂಗಾಣಿ ಬೆಕ್ಕನ್ನು ಕೂಡ ಅವನು ಮೆಚ್ಚುವನೆಂಬ ಭರವಸೆ ಇತ್ತು.

ಮಾರನೆಯ ದಿನ ಬೆಳಗ್ಗೆ ಒಂದು ಚೀಲ ರಂಗೋಲೆ ಪುಡಿಯನ್ನು ಪಲ್ಲು ಆಫೀಸಿನ ಬಾಗಿಲಿಗೆ ತಲೆಕೆಳಕಾಗಿ ಕಟ್ಟಿದೆ. ಉಗ್ರಸೇನರಾಯನು ಬಿಟ್ಟು ಬೇರೆ ಯಾವ ನರಪಿಳ್ಳೆಯೂ ಆ ದ್ವಾರದಿಂದ ಒಳಗೆ ಪ್ರವೇಸಿಸಕೂಡದು ಅಂತ ಪಲ್ಲೂಗೆ ಎಚ್ಚರಿಸಿದೆ.

"ಏಕೆ ?" ಅಂದ.

"ನಿನಗ್ಗೊತ್ತಿಲ್ಲ. ಆ ಮೇಲೆ ತಿಳಿಯುತ್ತೆ. ನಾ ಹೇಳಿದ್ದಾಗೆ ಮಾಡು" ಅಂದೆ.

"ಸರಿ. ನೀನೊಬ್ಬ ಕ್ರ್ಯಾಕು" ಅಂದ.

ನಾನು ಸುಮ್ಮನಿದ್ದೆ, ಒಳಗೇ ನಗುತ್ತ.

ಅವತ್ತು ನಮ್ಮ "ಮೈಗಳ್ಳರ ಸಂಘ"ದ ಪಕ್ಷೋತ್ಸವ. ಹಾಗಾಗಿ ರಾತ್ರಿ 11 ಘಂಟೆಯವರೆವಿಗೆ ಬಿಡುವೇ ಇರಲಿಲ್ಲ. ಮಾರನೆಯ ದಿನ "ಕುದುರೆ ಪ್ರೇಮಿಗಳ

ಕೂಟ"ದ ತುರ್ತು ಸಭೆ. ನಾನು ಹೋಗಲೇಬೇಕು. ಹೀಗಾಗಿ ನಾನು ಪುನಃ ಜನಸಾಕ್ಷಿ ಆಫೀಸಿಗೆ ಭೇಟಿ ಇತ್ತಾಗ ಸಂಜೆ ಐದರ ಸಮಯ. ಒಂದು ರೀತಿಯ ಭೀತಿಯಲ್ಲೇ ಹೋದೆ. ಪಲ್ಲು ಆಫೀಸಿನ ಪಕ್ಕದ ಕೋಣೆಗೆ ಸೇರಿದಾಗ ಆಫೀಸಿನಲ್ಲಿ ಬಿರುಸಿನ ಮಾತಾಗುತ್ತಿತ್ತು ಪಲ್ಲು, ಉಗ್ರಸೇನರಾಯರ ನಡುವೆ !

"ಇಲ್ಲಾ ಸಾರ್, ನಿಮ್ಮ ಕವನ ನನಗೆ ಬೇಕಿಲ್ಲ. ನೀವು ಹಿಂದೆ ನನಗೆ ಹೆಡ್ಮಾಸ್ಟರಾಗಿರಬಹುದು. ಆದರೆ ಈಗ ನೀವು ನನಗೆ ಹೆಡ್ಮಾಸ್ಟರಲ್ಲ ! ನಿಮ್ಮ ಈ ಹಾಳು ಕವನಾನ ಜನಸಾಕ್ಷಿಯ ಓದುಗರಿಗೆ ನಾನು ಕೊಟ್ಟು ಪೀಡಿಸೋಕೆ ತಯಾರಿಲ್ಲ"

"ಏನೆಂದೆ ಪ್ರಹ್ಲಾದ್ ? ಇಷ್ಟಕ್ಕೆ ಬಂದೆಯಾ ? ಆಗಲಿ. ನನ್ನ ಕವನವನ್ನು ಕಣ್ಣಿಗೊತ್ತಿಕೊಂಡು ಅಚ್ಚು ಹಾಕಲಿಕ್ಕೆ ಬೇರೆ ಪತ್ರಿಕೆಗಳು ನಿನ್ನ ಜನಸಾಕ್ಷಿಗಿಂತಲೂ ದೊಡ್ಡ ಪತ್ರಿಕೆಗಳು ಕಾದೇ ಇವೆ. ತಾ ಇಲ್ಲಿ" ಅನ್ನುತ್ತಾ, ಪಲ್ಲು ಕೈಯಿಂದ ತಮ್ಮ ಕವನದ ಪ್ರತಿಯನ್ನು ಕಿತ್ತುಕೊಂಡು, ನಾನಿದ್ದ ಕೋಣೆಯಿಂದ ತಮ್ಮ ಕೋಲನ್ನು ತೆಗೆದುಕೊಂಡು ಹಲ್ಲು ಕಡಿಯುತ್ತ ಉಗ್ರಸೇನರಾಯರು ಹೊರಟೇ ಬಿಟ್ಟರು.

ಈ ದೃಶ್ಯವನ್ನು ಅರಗಿಸುವುದಕ್ಕೆ ನನಗೆ ಮೂರು ನಿಮಿಷಗಳಾದವು. ಪಲ್ಲು ಅಂಗಿಯನ್ನ ಸರಿಪಡಿಸಿಕೊಳ್ಳುತ್ತಾ ಕೋಣೆಗೆ ಬಂದು ತನ್ನ ಹ್ಯಾಟನ್ನು ಕೈಗೆ ತೆಗೆದುಕೊಂಡ. ತಲೆಗೆ ಬ್ಯಾಂಡೇಜ್ ಕಟ್ಟಿದ್ದ.

"ಪಲ್ಲು...." ಅಂದೆ.

"ಅಯ್ಯೊ ಈಗ ನನಗೆ ಸುತರಾಂ ಸಮಯವಿಲ್ಲ. ಗಂಗಾಧರರಾಯರನ್ನ ಮತ್ತು ನನ್ನ ಭಾವೀ ಪತ್ನಿ ಶಶಿಕಲಾನ 'ನವರಂಗ್'ಗೆ ಕರ್ಕೊಂಡು ಹೋಗಬೇಕು ನಾಳೆ ಬೆಳಿಗ್ಗೆ ಭೇಟಿ ಮಾಡ್ತೇನೆ"

ಅನ್ನುತ್ತಾ 'ಚಾಜೂ ಜಹಾ ಹೈ ಪ್ಯಾರೇ' ಅಂತ ಹಾಡುತ್ತಾ ಹೊರಟೇ ಬಿಟ್ಟ.

ನಾನು ಸುಸ್ತಾಗಿ ಮನೆ ಸೇರಿದೆ.

"ಶೌರಿ"

"ಸರ್" ಅನ್ನುತ್ತಾ ಬಿಸಿ ಕಾಫಿ ತಂದ.

ನಡೆದ ಸಂಗತಿ ಪೂರ್ತಿ ಹೇಳಿದೆ.

"ಹೀಗಾಗಬಹುದು ಅಂತ ನನಗೆ ಗೊತ್ತಿತ್ತು, ಸರ್"

"ಹಾಗಾದರೆ ನಿನಗೆ ಇದರಿಂದ ಆಶ್ಚರ್ಯವಿಲ್ಲವೇ, ಶೌರಿ?"

"ಇಲ್ಲ ಸರ್. ಇವತ್ತು ಮಧ್ಯಾಹ್ನ ಗಂಗಾಧರರಾಯರು ಮತ್ತು ಅವರ ಮಗಳು ಪ್ರಹ್ಲಾದರಾಯರ ಬಗೆ ಇಲ್ಲಿ ವರ್ತಿಸಿದ್ದು ನೋಡಿದರೆ ಆಶ್ಚರ್ಯವೇನಿಲ್ಲ ಸರ್"

"ಏನಂದೆ ಇಲ್ಲಿ?"

ಕ್ಷಮಿಸಿ ಸರ್ ನಿಮ್ಮ ಸ್ನೇಹಿತರ ಸುಖಕ್ಕಾಗಿ ನೀವಿಲ್ಲದಿದ್ದಾಗ ಸ್ವಲ್ಪ ಸ್ವತಂತ್ರ ತೆಗೆದುಕೊಂಡೆ. ನೀವು 'ಕುದುರೆ ಪ್ರೇಮಿಗಳ ಕೂಟ'ಕ್ಕೆ ಹೋಗಿದ್ದಾಗ ಪ್ರಹ್ಲಾದ ರಾಯರು ಇಲ್ಲಿಗೆ ಬಂದರು. ಅವರ ಸ್ಥಿತಿ ಕರುಣಾಜನಕವಾಗಿತ್ತು. ಅದೂ ಇದೂ ಮಾತನಾಡುತ್ತ ನಿಮ್ಮ ಕೋಣೆಗೆ ನುಗ್ಗಿ ತಲೆ ಬಾಚುತ್ತ ನಿಂತಿದ್ದರು. ಅವರ ತಲೆ ಹಿಂಭಾಗ ನೋಡಿ ನನಗೆ ತಡೆಯಲಾರದೆ ನಿಮ್ಮ ವಿಜಯ ಹಜಾರೆ ಕ್ರಿಕೆಟ್ ಬ್ಯಾಟಿಂದ ಒಂದು ಬಾರಿಸಿದೆ. ತಕ್ಷಣ ಜ್ಞಾನ ತಪ್ಪಿ ಕೆಳಗೆ ಬಿದ್ದರು. ನಾನು ಓಡಿ ಹೋಗಿ ಗಂಗಾಧರರಾಯರಿಗೆ ಹೇಳಿದೆ. ಅವರೂ ಅವರ ಮಗಳೂ ಬಂದರು. ತಲೆಗೆ ಬ್ಯಾಂಡೇಜು ಮಾಡಿ ಶುಶ್ರೂಷೆ ಮಾಡಿದರು. ಪ್ರಹ್ಲಾದರಾಯರಿಗೆ ಎಚ್ಚರವಾದಾಗ ಅವರ ಬಾಯಿಂದ 'ಶಶಿಕಲಾ' ಅನ್ನುವ ಮಾತು ಬಂತು."

"ಅದಿರಲಿ ಶೌರಿ, ಪೆಟ್ಟು ಹೇಗಾಯ್ತು ಅಂತ ಯಾರೂ ಕೇಳಲಿಲ್ಲವೆ?"

"ಆ ವಿಷಯ ಬಂತು ಸರ್. ನೀವು ಮೊನ್ನೆ ತಂದಿದ್ದ ಪಿಂಗಾಣಿಯ ಬೆಕ್ಕು ರಾಯರ ತಲೆಯ ಮೇಲೆ ಬಿದ್ದು ಒಡೆಯಿತು" ಅಂದೆ.

"ಅದನ್ನು ಅವರು ನಂಬಿದರೆ ?"

"ನಂಬಲೇಬೇಕಾಯ್ತು, ಸರ್, ಬೆಕ್ಕಿನ ಚೂರುಗಳನ್ನು ತೋರಿಸಿದೆ"

"ಏನಂದೆ ? ಬೆಕ್ಕಿನ ಚೂರು...."

"ಹೌದು ಸರ್, ಪ್ರಹ್ಲಾದರಾಯರ ಮತ್ತು ಅವರ ಶಶಿಕಲಾದೇವಿಯ ಶುಭ ಕ್ಕಾಗಿ ಹಾಗೆ ಮಾಡಬೇಕಾಯ್ತು, ಸರ್. ಗುಲಾಬ್ ಜಾಮೂನ್, ಬಟಾಟೆ ಬೋಂಡ ತಯಾರಾಗಿದೆ. ತರಲೇ ಸರ್ ?"

ನೀವು ತಾನೇ ಏನು ಮಾಡುತ್ತಿದ್ದಿರಿ ?

ಸೈಡ್ ಎಫೆಕ್ಟ್

ಸೀ. ಆರ್. ಸತ್ಯ

ಏನು ಪೆದ್ದತನಾರೀ ನಿಮಗೆ? ಸೈಡ್ ಎಫೆಕ್ಟ್ ಅಂದರೆ ಏನೂ ಅಂತ ಇದುವರೆವಿಗೂ ನಿಮಗೆ ಗೊತ್ತಾಗಿಲ್ಲವೆ? ಹೇಳ್ತೀನಿ ಕೇಳಿ. ಇದು ವೈದ್ಯಕೀಯಕ್ಕೆ ಸಂಬಂಧಪಟ್ಟದ್ದು. ಈಗ ನಿಮಗೆ ಯಾವುದೋ ಒಂದು ಸಖತ್ ಖಾಯಿಲೆ ತಗಲಿತು ಅಂತ ಅನ್ನಿ. ಅದಕ್ಕೆ ನಿಮ್ಮ ವೈದ್ಯ ಮಹಾಶಯರು ನಿಮಗೆ ಒಂದು ಔಷಧ ಬರೆದುಕೊಡ್ತಾರೆ. ಅದನ್ನ ನೀವು ನುಂಗುತ್ತೀರಿ. ತಕ್ಷಣವೇ ನಿಮಗೆ ಅನೇಕ ರೀತಿಯ ಸೈಡ್ ಕಂಪ್ಲೇಂಟ್‌ಗಳು ಶುರುವಾಗಿ ನಿಮಗೆ ನಿಮ್ಮ ಮೈನ್ ಕಂಪ್ಲೇಂಟೇ ಮರೆತು ಹೋಗುತ್ತೆ. ಈ ಸೈಡ್ ಕಂಪ್ಲೇಂಟ್‌ಗಳನ್ನ ತಡೆದುಕೊಳ್ಳೋಕ್ಕೆ ಆಗದೆ ನೀವು ಅದೇ ವೈದ್ಯರ ಹತ್ತಿರ ಮತ್ತೊಮ್ಮೆ ಹೋಗುತ್ತೀರಿ. ಕುಂಬಳಕಾಯಿಯ ಹಾಗೇ ಊದ್ಕೊಂಡಿರೋ ನಿಮ್ಮ ಮುಖವನ್ನ, ಸೋರೇಕಾಯಿ ತರಹ ಸೊಗ್ಗಿರೋ ನಿಮ್ಮ ಕಾಲನ್ನ, ಸುಲಿದ ತೆಂಗಿನಕಾಯಿಯ ಹಾಗೋ ಕಾಣೋ ನಿಮ್ಮ ತಲೇನಾ ಡಾಕ್ಟರ್ ನೋಡಿ, ಉಸಿರು ಕಟ್ಟಿ ನಿಂತಿರೋ ನಿಮ್ಮ ಎದೆಗೆ ಸ್ಟೆತೋಸ್ಕೋಪ್ ಇಟ್ಟು, ಒಂದು ತರಹ ಕುಹಕವಾಗಿ ನಗ್ತಾರೆ. "ಏನೂ ಹೆದರಬೇಡಿ. ನಾನು ಬರೆದುಕೊಟ್ಟನಲ್ಲಾ ಔಷಧಿ, ಅದರ ಸೈಡ್ ಎಫೆಕ್ಟು, ಅಷ್ಟೇ!" ಅಂತಾರೆ. ಈ ರೀತಿ ಪಡೋ ತಾಪತ್ರಯಕ್ಕೇ ಸೈಡ್ ಎಫೆಕ್ಟು ಅಂತಾರೆ.

ಏನಂದ್ರಿ, ಉದಾಹರಣೆ ಬೇಕಾ ? ಕೊಡ್ತೀನಿ, ಬೇಕಾದ್ಹಾಗೆ ಕೊಡ್ತೀನಿ.

ನಮ್ಮ ರೋಡಿನ ಕೊನೇ ಮನೇಲೇ ಇದಾರಲ್ಲ ಕಾಳಪ್ಪನವರು. ಲಾಯರ್ರು ಅವರಿಗೆ ಒಂದು ತಿಂಗಳ ಹಿಂದೆ ಯಾಕೋ ಪಾಪ ಗಂಟಲಲ್ಲಿ ಕೆರೆತ, ನೋವು ಕಾಣಿಸಿಕೊಂಡಿತಂತೆ. ಮಾತಾಡೋಕ್ಕೆ ಕಷ್ಟವಾಗಿ, ನ್ಯಾಯಾಲಯದಲ್ಲಿ ಯುವರ್ ಆನರ್ ಅಂತ ಹೇಳೋದಕ್ಕೂ ಬಾಯಿ ಬರದೆ ಚಡಪಡಿಸಿದಾಗ, "ನಿಮ್ಮ ಗಂಟಲು ಸರಿಯಾದ ಮೇಲೆ ಒನ್ನಿ. ಅಲ್ಲಿ ತನಕ ಈ ಕೇಸನ್ನ ಮುಂದೂಡಿದೀವಿ" ಅಂತ ನ್ಯಾಯಾಧೀಶರೇ ಹುಕುಂ ಕೊಟ್ಟರಂತೆ. ಸರಿ, ಕಾಳಪ್ಪನವರನ್ನು ಪರೀಕ್ಷೆ ಮಾಡಿದ ಡಾಕ್ಟರು ಆರೇಳು ತರಹದ ಮಾತ್ರೆಗಳನ್ನ ಬರೆದುಕೊಟ್ಟು ದಿನಕ್ಕೆ ನಾಲ್ಕು ಸಲವಾದರೂ ಉಪ್ಪು ನೀರಿನಲ್ಲಿ ಗಂಟಲನ್ನ ತೊಯ್ಯಿಸಿಕೊಂಡು ಸ್ವಲ್ಪ ದಿನಗಳ ಕಾಲ ಮಾತು ಕಮ್ಮಿ ಮಾಡಿ ಅಂತ ಆಜ್ಞಾಪಿಸಿದರಂತೆ. ಕಾಳಪ್ಪನವರು ಡಾಕ್ಟರ್ ಹೇಳಿದ್ದನ್ನ ಅಕ್ಷರಶಃ ಪರಿ

ಪಾಲಿಸಿವರುತೆ. ಆದರೆ ಅದರಿಂದ ಅವರ ಪಾಲಿಗೆ ದಕ್ಕಿದ ಸೈಡ್ ಎಫೆಕ್ಟುಗಳ ಪಟ್ಟಿ ನೋಡಿ:–

ಒಂದು ರಕ್ತದ ಒತ್ತಡ ಎರಡರಷ್ಟು ಆಗಿ, ತಲೆ ನೋವು, ಎದೆ ಬಡಿತದ ಜೊತೆಗೆ ಎಡಗಾಲಿನಲ್ಲಿ ಲಘುವಾಗಿ ಪಾರ್ಶ್ವವಾಯು! ಕಾರಣ? ಗಂಟಲಿನಲ್ಲಿ ಗಳಗಳ ಮಾಡೋದರ ಬದಲು, ಉಪ್ಪು ನೀರನ್ನ ಗಟ ಗಟ ಕುಡಿದ ಕಾರಣ ಕಾಳಪ್ಪನವರ ಸಿಸ್ಟಮ್ಮಿನಲ್ಲಿ 'ಕಾಮನ್ ಸಾಲ್ಟ್' ಜಾಸ್ತಿಯಾದದ್ದು!

ಎರಡು: ಕತ್ತಿನ ಮೇಲಿಂದ ಹಣೆಯವರೆಗೆ ಚರ್ಮ ವಿವಿಧ ಬಣ್ಣಗಳಿಂದ ಮಿಂಚಿ, ಮುಖವೆಲ್ಲಾ ಊತ; ಒಂದು ಕಣ್ಣು ಪೂರಾ ಲಾಕ್ ಔಟ್! ಇನ್ನೊಂದು ಕಣ್ಣಿಗೆ ಸೂರ್ಯ ರಶ್ಮಿ ತಾಕಿದರೆ ಸಾಕು, ಕಾವೇರಿ ನೀರು ಮಿಂಚುತ್ತೆ. ಕಾರಣ? ಕಾಳಪ್ಪನವರು ವಿಟಮಿನ್ "ಎ"ಗೆ ಅಲರ್ಜಿಯಂತೆ!

ಮೂರು: ಹೊಟ್ಟೆ ಒಳಗೆ ಬೆಂಕಿ. ಊಟ ಮಾಡಿದರೂ ಕಷ್ಟ, ಬರಿ ಹೊಟ್ಟೆಯಲ್ಲಿದ್ದರೂ ಕಷ್ಟ. ಈ ಬೆಂಕಿಯ ಕಿಚ್ಚಿನಿಂದ ಕತ್ತಿನವರೆಗೂ ನೋವಿನ ಬಾಣಗಳ ತಿವಿದಾಟ. ಅತ್ತಲಾಗಿ ಹಾರ್ಟ್ ಅಟ್ಯಾಕೂ ಅಲ್ಲ; ಇತ್ತಲಾಗಿ ಗ್ಯಾಸ್ಟ್ರೈಟಿಸೂ ಅಲ್ಲ. ಕಾರಣ? ಕಾಳಪ್ಪನವರು ಅವರಿಗೆ ಬರೆದುಕೊಟ್ಟ ಆಂಟಿಬಯಾಟಿಕ್‌ಗೆ 'ಟಾಲರೆಂಟ್' ಅಲ್ಲವಂತೆ!

ನಾಲ್ಕು ನಿಂತರೆ ತಲೆ ತಿರುಗು; ಕೂತರೆ ಎಲ್ಲಾ ಮರೆವು. ಕಾರಣ? ನೋವಿನ ಶಮನಕ್ಕೆ ಎಂದು ನುಂಗಿದ ಮಾತ್ರೆಗಳ ತಯಾರಕರೇ ಹೇಳಿದ್ದಾರಂತೆ: 100 ಜನರಲ್ಲಿ ಒಬ್ಬರಿಗಾದಾರೂ ಈ ರೀತಿಯ ಅಸ್ತವ್ಯಸ್ತ ಆಗಬಹುದು ಅಂತ. ಆ 100 ಜನರಲ್ಲಿ ಒಬ್ಬರೇ ನಮ್ಮ ಕಾಳಪ್ಪನವರು!

ಈ ಕಷ್ಟಗಳನ್ನೆಲ್ಲಾ ನೋಡಿ ಸಹಿಸಲಾಗದೆ ನ್ಯಾಯಾಧೀಶರು ಮೊನ್ನೆ, "ಈ ಕೇಸನ್ನ 21ನೆಯ ಶತಮಾನದ ಮೊದಲಿಗೆ ಮುಂದೂಡಿದ್ದೀನಿ. ಅಷ್ಟರಲ್ಲಿ ಕಾಳಪ್ಪನವರು ಹುಶಾರಾಗಿ ಬಂದರೆ ಸರಿ, ಇಲ್ಲದಿದ್ದರೆ ಕಕ್ಷಿದಾರರು ಬೇರೊಬ್ಬ ಅಡ್ವೊಕೇಟರನ್ನ ಗೊತ್ತುಮಾಡತಕ್ಕದ್ದು" ಎಂದು ತೀರ್ಮಾನಿಸಿದರಂತೆ!

ನಮ್ಮ ಪುಟ್ಟಸ್ವಾಮಿ ಮಗ—ಸುಂದರ—ಕ್ರಿಕೆಟ್ ಆಡ್ತಾ ಎಡಗೈನ ಮೂಳೆ ಮುರಿದುಕೊಂಡ. ಒಂದೂವರೆ ತಿಂಗಳು ಪ್ಲ್ಯಾಸ್ಟರ್‌ನಲ್ಲೇ ಇದ್ದು, ನಂತರ ತೆಗೆದಾಗ "ಮೂಳೆ ಸೇರ್ಕೊಂಡಿಲ್ಲ. ಇದಕ್ಕೊಂದು ಆಪರೇಶನ್ ಮಾಡ್ತೀವಿ" ಅಂತ ಡಾಕ್ಟರು ಹೇಳಿ, ಸುಂದರ ಜ್ಞಾನವಿಲ್ಲದೇ ಮಲಗಿದ್ದಾಗ ಅವನ ಬಲ

ಗಾಲಿಂದ ಒಂದು ಮೂಳೆ ತುಂಡೊಂದನ್ನು ಕತ್ತರಿಸಿ ಅವನ ಕೈಗೆ ರವಾನಿಸಿದ ರಂತೆ. ಜ್ಞಾನ ಬಂದ ಮೇಲೆ, "ಇದೇನಿದು, ನನ್ನ ಬಲಗಾಲ ಮೇಲೂ ಏನೋ ಬ್ಯಾಂಡೇಜ್ ಬಂತಲ್ಲಾ ?" ಅಂತ ಹೆದರಿಕೆಗೆ, ಅನಸ್ತೇಸಿಯಾ ಇಲ್ಲದೆಯೇ ಸುಂದರ ಇನ್ನೊಂದು ಸಲ ಜ್ಞಾನ ಕಳೆದುಕೊಂಡನಂತೆ! ಸ್ವಲ್ಪ ದಿನಗಳಾದ ಮೇಲೆ, ಡಾಕ್ಟರು, "ನಿನ್ನ ಬಲಗಾಲಿಂದ ತುಂಡು ತೆಗೆದಿದ್ದೆವಲ್ಲಾ, ಅದನ್ನ ಸರಿಮಾಡೋಕ್ಕೆ ನಿನ್ನ ಎಡಗಾಲಿಂದ—" ಅಂತ ಏನೋ ಹೇಳೋಕ್ಕೆ ಹೊರಟಾಗ, ಸುಂದರ ಆಸ್ಪತ್ರೆಯಿಂದ ಹೇಳದೇ ಕೇಳದೇ ಕುಂಟುತ್ತಾ, ಓಡೇ ಹೋದನಂತೆ. ಮನೆಗೆ ಇದುವರೆಗೂ ಬಂದಿಲ್ಲ. ಪಾಪ, ಅವನ ತಂದೆ ತಾಯಿ ಪೇಪರಿನಲ್ಲೂ ಒಂದು ಜಾಹಿರಾತು ಹಾಕಿಸಿದರಂತೆ: "ಪ್ರೀತಿಯ ಸುಂದರ, ನಿನ್ನ ಬಲಗಾಲು ಎಷ್ಟೇ ಊನ ಆದರೂ ನಿನ್ನ ಎಡಗಾಲಿಗೆ ನಾವು ಖಂಡಿತ ಅಪರೇಶನ್ ಮಾಡಿ ಸೋದಿಲ್ಲ. ನೀನು ಎಲ್ಲಿದ್ದರೂ ಈಗಲೇ ಹಿಂತಿರುಗಿ ಬಾ" ಅಂತ. ಆದರೆ, ಇದುವರೆವಿಗೂ, ಆಸಾಮಿ ಪತ್ತೆಯೇ ಇಲ್ಲ!

ಮೂಲೆ ಮನೆ ಜಾನಕಮ್ಮನ ಕತೆಯೇ ಬೇರೆ. ಜಾನಕಮ್ಮ ಅವರ ಚಿಕ್ಕ ವಯಸ್ಸಿನಿಂದಲೂ ಹೆವಿ ವೈಟ್ ಕ್ಯಾಟಗರಿಯಲ್ಲೇ ಇದ್ದವರು. ಮೊನ್ನೆ ಅವರನ ಅವರ ಡಾಕ್ಟರು ತೂಕ ಹಾಕಿದಾಗ, ತೂಕದ ಯಂತ್ರದ ಮುಳ್ಳು ದಢಾರಂತ ಬಲಗಡೆ ಪಕ್ಕಕ್ಕೆ ಬಡಿದು 130 ಕೆ.ಜಿ.ಯ ಗೆರೆಯ ಮೇಲೆ ನಿಂತಿತಂತೆ. ಡಾಕ್ಟರು ನಿಟ್ಟುಸಿರು ಬಿಡುತ್ತಾ, "ನೋಡೀಮ್ಮಾ, ಈ ಯಂತ್ರಾನ ಹೇಗೋ ರಿಪೇರಿ ಮಾಡ್ಕೋತೀನಿ, ಬಿಡಿ. ಆದರೆ ಈಗ ನಿಮ್ಮನ್ನ ರಿಪೇರಿ ಮಾಡೋದೇ ನನ್ನ ಯೋಚನೆ ಆಗಿದೆ. ನಿಮ್ಮ ತೂಕಕ್ಕೆ ದೇವರು ಎರಡು ಹಾರ್ಟುಗಳನ್ನ ಕೊಡ ಬೇಕಿತ್ತು. ಒಂದೇ ಒಂದು ಕೊಟ್ಟು ಮೋಸ ಮಾಡಿದ! ನೀವು ಚೆನ್ನಾಗಿ ವಾಕಿಂಗ್ ಮಾಡಿ, ಡಯಟ್ ಮಾಡಿ, ನಿಮ್ಮ ತೂಕಾನ 100 ಕೆ. ಜಿ. ಗೆ ಇಳಿಸಲೇಬೇಕು. ಜೊತೆಗೆ ಈ ಮಾತ್ರೆಗಳನ್ನ ತೊಗೊಳ್ಳಿ. ನಿಮ್ಮ ದೇಹದಲ್ಲಿರೋ ಉಪ್ಪಿನಾಂಶವ ನ್ನೆಲ್ಲಾ ಹೊರಗೆ ಹಾಕಿ ನಿಮ್ಮ ಬ್ಲಡ್ ಪ್ರಶರ್‌ನ ಕಮ್ಮಿ ಮಾಡುತ್ತೆ" ಎಂದರಂತೆ.

ಜಾನಕಮ್ಮ ಚಾಚೂ ತಪ್ಪದೆ ಮಾತ್ರೆ ತೊಗೊಂಡು ವಾಕಿಂಗ್ ಶುರುಮಾಡಿದ ರಂತೆ. ಸ್ವಲ್ಪ ದಿನಗಳಾದ ಮೇಲೆ, ಅವರ ವಾಕಿಂಗ್ ಸಮಯದಲ್ಲಿ ಇದುವರೆಗೂ ಅವರನ್ನ ಕಂಡರೆ ಬಾಲ ಅಲ್ಲಾಡಿಸಿ ಆಟ ಆಡ್ತಾ ಇದ್ದ ಪಕ್ಕದ ಮನೆ ನಾಯಿ, ಇದ್ದ ಕ್ಕಿದ್ದಂತೆ ಅವರ ಮೇಲೆ ಗುರ್ ಅಂತ ಎಗರಿತಂತೆ. "ಇದೇನು, ನಾನೇನಾದರೂ ಬೇರೇ ತರಹ ಕಾಣಿಸ್ತೇನೆಯೆ ?" ಅಂತ ಸಂಶಯಪಟ್ಟುಕೊಂಡು ಜಾನಕಮ್ಮ ಮತ್ತೆ ಅವರ ಡಾಕ್ಟರ ಬಳಿ ಹೋದರಂತೆ. ಡಾಕ್ಟರು ಆಕೆಯನ್ನ ನೋಡಿ ಮಹದಾಶ್ಚರ್ಯ ಪಟ್ಟರಂತೆ. ಇನ್ನೊಮ್ಮೆ ತೂಕ-ಹಾಕಿದರಂತೆ. ಜಾನಕಮ್ಮನ ತೂಕ 150 ಕೆ. ಜಿ.

ಯಲ್ಲಿ ನಿಂತಿತ್ತಂತೆ! ತೂಕದ ಯಂತ್ರ ಗ್ಯಾರಂಟಿ ಪೀರಿಯಡ್ಡಿನಲ್ಲೂ ಇಲ್ಲವಲ್ಲಾ ಅಂತ ಉಕ್ಕಿ ಬಂದ ದು:ಖವನ್ನು ನುಂಗುತ್ತಾ, ಡಾಕ್ಟರು, "ನೋಡೀಮ್ಮಾ, ನಾನು ನಿಮಗೆ ಕೊಟ್ಟ ಮಾತ್ರೆಗಳ ಸೈಡ್ ಎಫೆಕ್ಟು ಇದು. ನಿಮ್ಮ ಹಾರ್ಮೋನ್ ಬ್ಯಾಲೆನ್ಸ್ ಸ್ವಲ್ಪ ಕೆಟ್ಟೋಗಿದೆ. ಬೇರೆ ಒಂದು ಕೋರ್ಸು ಔಷಧ ಕೊಡ್ತೀನಿ, ಸರಿ ಹೋಗುತ್ತೆ" ಅಂದರಂತೆ.

"ಅಯ್ಯೋ, ಬಿಡಿ ಡಾಕ್ಟರೆ, ಈ 150 ಕೆ. ಜಿ. ತೂಕ ನನಗೆ ಹಾಯಾಗಿದೆ. ಹಾರ್ಮೋನ್ ಬ್ಯಾಲನ್ಸ್‌ಗೆ ಬೆಂಕಿ ಹಾಕ್ತು! ಈಗ ನಡೆಯೋದಕ್ಕಂತೂ ನನಗೆ ಒಳ್ಳೆ ಬ್ಯಾಲನ್ಸ್ ಸಿಗುತ್ತೆ ಬಿಡಿ" ಅಂತ ಜಾನಕಮ್ಮ ಅಲ್ಲಿಗೇ ಔಷಧಿಗಳನ್ನ ನಿಲ್ಲಿಸಿದರಂತೆ.

ಪಕ್ಕದ ಮನೆ ನಾಯಿ ಅಂತ ಹೇಳಿದೆ ಅಲ್ಲವೆ? ಇನ್ನೇನೋ ಜ್ಞಾಪಕಕ್ಕೆ ಬಂತು. ಇದೊಂದು ಭಾರೀ ಸೈಡ್ ಎಫೆಕ್ಟಿನ ಉದಾಹರಣೆ. ನಮ್ಮ ಬಡಾವಣೆಯ ಜಾನ್ ಜೇಕಬ್ ಒಂದು ಗಡವಾ ನಾಯಿಯನ್ನ ಸಾಕಿದ್ದಾನೆ. ಅದರ ಹೆಸರು: ಹಿಟ್ಲರ್. ಅವನ ಹೆಂಡತಿ ಮಾರ್ಗರೆಟ್‌ಗಂತೂ ಅದನ್ನ ಕಂಡರೆ ಪಂಚಪ್ರಾಣ. ಹಿಟ್ಲರ್‌ಗೆ ಒಂದು ವಾರದ ಹಿಂದೆ ವಾಂತಿ ಭೇದಿಯಾಯಿತಂತೆ. ನಾಯಿ ಡಾಕ್ಟರು. "ಇದಕ್ಕೆ ಇಂಜಕ್ಷನ್ ಕೊಡಲೇ ಬೇಕು ಸ್ವಲ್ಪ ಪರೀಕ್ಷಣೆ ಟೇಬಲ್ ಮೇಲೆ ಕೂರಿಸಿ ಹಿಡಿದುಕೊಳ್ಳಿ. ಮೊದಲು ಅದರ ಬಾಯಿಗೆ ಹಗ್ಗ ಕಟ್ಟಿ ಇಂಜಕ್ಷನ್ ಚುಚ್ಚುತ್ತೀನಿ" ಎಂದರಂತೆ. ಆದರೆ, ಹಿಟ್ಲರ್‌ಗೆ ಯಾಕೋ ಅನುಮಾನ ಬಂದು, ನಿಂತ ಕಡೆಯಿಂದ ಜಗ್ಗಲಿಲ್ಲವಂತೆ. ಕೊನೆಗೆ ಜೇಕಬ್, ಮಾರ್ಗರೆಟ್, ಡಾಕ್ಟರು ಒಂದು ಕಡೆ; ಆಸ್ಪತ್ರೆಯ ಮೇಲ್ ನರ್ಸ್ ಚೆನ್ನಪ್ಪ, ಅಸಿಸ್ಟೆಂಟ್ ಡಾಕ್ಟರ್ ರಂಗರಾಜು ಒಂದು ಕಡೆ, ಹೀಗೆ ಹಿಟ್ಲರ್‌ನ ಹೇಗೋ. ಹಿಡಿದುಕೊಂಡು ಟೇಬಲ್ ಮೇಲೆ ಕುಕ್ಕಿದರಂತೆ. "ಅರ್ಧ ನಿಮಿಷ ಹಾಗೇ ಹಿಡ್ಕೊಂಡಿರಿ. ಈ ಇಂಜಕ್ಷನ್ ಚುಚ್ಚಿ ಬಿಡ್ತೀನಿ" ಅಂತ ಹೇಳಿ ಡಾಕ್ಟರು ಐದು ಜನದ ಜಂಟಿ ಕುಸ್ತಿರಂಗದ ಹಾಗೆ ಕಾಣುತ್ತಿದ್ದ ಆ ಟೇಬಲ್ ಒಳಗೆ ಕೈ ಹಾಕಿ ಇಂಜಕ್ಷನ್ ಚುಚ್ಚಿದರಂತೆ. ತಕ್ಷಣ ಡಾಕ್ಟರ್ ರಂಗರಾಜು "ಅಯ್ಯಯ್ಯೋ" ಅಂತಲೂ, ಮಾರ್ಗರೆಟ್ "ಓ ಗಾಡ್!" ಅಂತಲೂ ಕೂಗಿಕೊಂಡರಂತೆ. ಏನಪ್ಪ ಅಂತ ನೋಡಿದರೆ ಟೇಬಲ್ ಮೇಲೆ ಹಿಟ್ಲರ್ ನಾಪತ್ತೆ! ರಂಗರಾಜು ಕೈಗೆ ಹಗ್ಗ ಕಟ್ಟಿತ್ತಂತೆ. ಇಂಜಕ್ಷನ್ ಸೀಡಲ್ಲು ಮಾರ್ಗರೆಟ್ ಪೃಷ್ಠಿಯಲ್ಲಿ ಕೂತಿತ್ತಂತೆ!

ಈಗ ಅರ್ಥವಾಯ್ತೇನ್ರೀ, ಸೈಡ್ ಎಫೆಕ್ಟು ಅಂದ್ರೆ ಏನೂ ಅಂತ?

ಪ್ರಿನ್ಸ್‌ಟನ್

(ಮೂಲ: ರಿಚರ್ಡ್. ಪಿ. ಫೇನ್‌ಮನ್. ಕನ್ನಡಕ್ಕೆ: ಶಿವು)

ನಾನು ವಿಜ್ಞಾನದಲ್ಲಿ ಪದವಿ ಪಡೆಯಲು ಪ್ರಿನ್ಸ್‌ಟನ್‌ಗೆ ಹೋಗಲು ನಿರ್ಧರಿಸಿದೆ. ಪ್ರಿನ್ಸ್‌ಟನ್, ಹಳೇ ಇಂಗ್ಲೀಷ್ ಕಂದಾಚಾರವನ್ನು ಅಕ್ಷರಶಃ ಪಾಲಿಸುವ ಕಾಲೇಜೆಂದು ತಿಳಿದದ್ದು ಅಲ್ಲಿ ಸೇರಿದ ಮೇಲೆಯೆ. ನಮ್ಮ ತಂದೆ ನನ್ನನ್ನು ಪ್ರಿನ್ಸ್‌ಟನ್‌ಗೆ ತಮ್ಮ ಕಾರಿನಲ್ಲಿ ಕರೆದುಕೊಂಡು ಹೋಗಿ, ಅಲ್ಲಿನ ಹಾಸ್ಟೆಲ್‌ನಲ್ಲಿ ನನ್ನನ್ನು ಸೇರಿಸಿದ್ದರು. ಹೋದ ಒಂದು ತಾಸಿನೊಳಗೆ ಶ್ರೀಮದ್ಗಾಂಭೀರ್ಯದ ಮನುಷ್ಯನೊಬ್ಬ ನನ್ನ ಬಳಿಗೆ ಬಂದು,

"ಇಲ್ಲಿನ ವಿದ್ಯಾರ್ಥಿ ಸಮೂಹದ ಅನುಕೂಲಗಳನ್ನು ನೋಡಿಕೊಳ್ಳುವ ಜವಾಬ್ದಾರಿ ನನ್ನದು. ಇಂದು ಸಂಜೆ ಕಾಲೇಜಿನ ಡೀನ್ ಅವರು ಹೊಸ ವಿದ್ಯಾರ್ಥಿಗಳಿಗಾಗಿ ಒಂದು "ಟೀ" ಏರ್ಪಡಿಸಿದ್ದಾರೆ. ತಾವು ಈ ಸಮಾರಂಭಕ್ಕೆ ಖಂಡಿತ ಬರಬೇಕು" ಎಂದು ಬಹುಗ್ರಾಂಥಿಕವಾಗಿ ಮಾತನಾಡಿ ತೆರಳಿದ. ಅವನ ಭಾಷೆ ನನಗೆ ತೀರಾ ಮೋಜೆನಿಸಿತು. ಸಂಪೂರ್ಣವಾಗಿ ಬ್ರಿಟಿಷ್ ಶೈಲಿಯಲ್ಲಿ ಇಂಗ್ಲೀಷ್ ಮಾತನಾಡುತ್ತಿದ್ದ ಈ ಪ್ರೊಫೆಸರ್ "ಫ್ರೆಂಚ್ ಲಿಟ್ರೇಛಾ" ಹೇಳಿ ಕೊಡುತ್ತಿದ್ದನಂತೆ.

ಈ "ಟೀ" ಸಮಾರಂಭದ ಬಗ್ಗೆ ನನಗೆ ಏನೇನೂ ತಿಳಿದಿರಲಿಲ್ಲ. "ಟೀ" ಏರ್ಪಡಿಸಿದ್ದ ಡೀನ್ ಆಫೀಸಿನ ಹೊರ ಹಜಾರವನ್ನು ಪ್ರವೇಶಿಸಿದೆ, ದೊಡ್ಡ ದೇಗುಲದಂತಿದ್ದ ಹಜಾರ. ಒಂದು ಕಡೆ ಹಲವು ಮಹಿಳೆಯರು ಮೆಲುದನಿಯಲ್ಲಿ ಏನನ್ನೋ ಚರ್ಚಿಸುತ್ತಿದ್ದರು. ಒಂದಿಬ್ಬರು ತರುಣಿಯರು. ಮಿಕ್ಕಂತೆ ಕರಿಯ ಗೌನುಗಳನ್ನು ಧರಿಸಿದ್ದ ಹಳೆಯ ಶಿಲಾಯುಗದ ಮಾನವರು. ದೂರದ ಮೇಜಿನ ಮೇಲಿದ್ದ "ಟೀ"ಯನ್ನು ನಾನೇ ತೆಗೆದುಕೊಳ್ಳಬೇಕೇ ಅಥವಾ ಮರ್ಯಾದೆಯಾಗಿ ತರುಣಿಯೊಬ್ಬಳ ಸಂಗಡ ಲೋಕಾಭಿರಾಮವಾಗಿ ಮಾತುಕತೆ ಆರಂಭಿಸೋಣವೇ ಎಂದು ಚಿಂತಿಸುತ್ತಿರುವಾಗವೇ ಶ್ರೀಮತಿ ಐಸನ್ ಹಾರ್ಟ್ (ಡೀನ್‌ರವರ ಪತ್ನಿ) ನನಗೆ ಒಂದು ಚಹಾ ತುಂಬಿದ ಕಪ್ಪನ್ನು ಕೊಟ್ಟು.

"ಟೀ ಜೊತೆಗೆ ನಿಂಬೆರಸ ಅಥವಾ ಹಾಲು, ಯಾವುದು ಇಷ್ಟ ಪಡುತ್ತೀರ?" ಅಂತ ಕೇಳಿದರು.

ಎತ್ತರದ ನಿಲುವಿನ, ಅಷ್ಟೇ ಗಾತ್ರದ ಆ ಮಹಿಳೆಯ ಪ್ರಶ್ನೆಯಿಂದ ನಾನು ತಬ್ಬಿಬ್ಬಾಗಿ "ನನಗೆ ಎರಡೂ ಇಷ್ಟ" ಎಂದು ಬಡಬಡಿಸಿದೆ.

ಆಕೆ "ಹ್ಹೆ, ಹ್ಹೆ, ಹ್ಹೆ, ಹ್ಹೆ, ನೀವು ಬಹಳಾ ತಮಾಷೆ ಮಾಡುತ್ತೀರ" ಎಂದಳು.

ತಮಾಷೆ!...ಎಂಥ ತಮಾಷೆ? ನಾನು ಏನೋ ಅಚಾತುರ್ಯ ಮಾಡಿರಬೇಕು. ಅದಕ್ಕೇ ಈ ತಿರಸ್ಕಾರದ ನಗು. ಮರುಕ್ಷಣ ನನಗೆ ನನ್ನ ತಪ್ಪಿನ ಅರಿವಾಯಿತು.

ಮುಂದಿನ ಹಲವು ದಿನಗಳಲ್ಲಿ ಈ "ಹ್ಹೆ, ಹ್ಹೆ, ಹ್ಹೆ, ಹ್ಹೆ"ಯ ಅರ್ಥ ಚೆನ್ನಾಗಿ ಮನದಟ್ಟಾಯಿತು. ಅದು ತಮಾಷೆಯನ್ನು ಕಂಡು ನಗುವ ಹಾರ್ದಿಕ ನಗುವಲ್ಲ. "ನೀನು ನಮ್ಮ ಸಾಮಾಜಿಕ ನಡವಳಿಕೆಯಲ್ಲಿ, ಕ್ಷಮಿಸಲಾಗದ ತಪ್ಪು ಮಾಡುತ್ತಿದ್ದೀಯಾ" ಎಂದು ಎಚ್ಚರ ನೀಡುವ ನಗು ಅದು. ಇನ್ನೊಮ್ಮೆ ಯಾವನೋ ಒಬ್ಬ ಹೊಸ ಕುರಿ, ಶ್ರೀಮತಿ ಐಸನ್ ಹಾರ್ಟ್‌ಳ ಎಡಗೈಗೆ ಮುತ್ತಿಟ್ಟಾಗ ಇದೇ "ಹ್ಹೆ ಹ್ಹೆ ಹ್ಹೆ ಹ್ಹೆ" ಎಂಬ ದೆವ್ವದ ನಗೆ ಹೊರ ಹೊಮ್ಮಿತ್ತು (ಗಣ್ಯ ಮಹಿಳೆಯರ ಬಲಗೈಗೆ ಮುತ್ತಿಕ್ಕುವುದು ಅಲ್ಲಿನ ಶಿಷ್ಟಾಚಾರವಂತೆ).

ಹಲವು ತಿಂಗಳುಗಳ ನಂತರ, ಇನ್ನೊಂದು ಇಂಥದೇ "ಟೀ" ಸಂದರ್ಭದಲ್ಲಿ ನಾನು ಪ್ರೊಫೆಸರ್ ವಿಲ್ಡ್‌ಟ್‌ರವರೊಂದಿಗೆ, ಶುಕ್ರ ಗ್ರಹದ ವಾತಾವರಣದ ಬಗ್ಗೆ ಮಾತನಾಡುತ್ತಿದ್ದೆ. ವಿಷಯ ಸ್ವಾರಸ್ಯವಾಗಿದ್ದು, ನಾವಿಬ್ಬರೂ ನಮ್ಮ ಸಂಭಾಷಣೆಯಲ್ಲಿ ತಲ್ಲೀನರಾಗಿದ್ದೆವು. ಆ ಸಮಯಕ್ಕೆ ಸರಿಯಾಗಿ ಒಬ್ಬ ತರುಣಿ ನನ್ನ ಬಳಿ ಬಂದು,

"ಶ್ರೀಮತಿ ಐಸನ್ ಹಾರ್ಟ್‌ರವರು ತಮ್ಮನ್ನ ನೋಡ ಬಯಸುತ್ತಾರೆ" ಎಂದಳು. ನಾನು, "ಆಯಿತು, ಒಂದು ನಿಮಿಷ" ಅಂತ ಹೇಳಿ ನನ್ನ ಮಾತುಕತೆ ಮುಂದುವರಿಸಿದೆ. ಪುನಃ ಅದೇ ತರುಣಿ ಬಂದು,

"ಫೇನ್ ಮನ್‌ರವರೇ, ಶ್ರೀಮತಿ ಐಸನ್ ಹಾರ್ಟ್‌ರವರು ತಮಗಾಗಿ ಕಾಯುತ್ತಿದ್ದಾರೆ" ಅಂತ ಸ್ವಲ್ಪ ಖಂಡಿತವಾಗಿಯೇ ಹೇಳಿದಳು.

ಏನು ಜರೂರಿನ ಕೆಲಸವೋ ಅಂತ ನಾನೂ ಅವರ ಬಳಿ ಓಡಿದೆ. ಆಕೆ ನಿಧಾನವಾಗಿ "ಟೀ" ಬೆರೆಸುತ್ತಿದ್ದರು. ನನ್ನನ್ನು ನೋಡಿದ ಕೂಡಲೇ, "ಕಾಫಿ ಅಥವಾ ಟೀ, ತಮಗೆ ಯಾವುದನ್ನು ಕೊಡಲಿ?" ಅಂತ ಕೇಳಿದರು.

"ನೀವೇನೋ ನನ್ನನ್ನು ಬಹು ಜರೂರಾಗಿ ನೋಡ ಬಯಸಿದರಂತಲ್ಲಾ?"

"ಹ್ಹೆ ಹ್ಹೆ ಹ್ಹೆ ಹ್ಹೆ, ನಿಮಗೆ ಕಾಫಿಯೋ, ಟೀ ಕೊಡಲೋ?"

"ಟೀ ಕೊಡಿ" ಅಂತ ಹೇಳಿದೆ.

ಈ ಬಾರಿ ಈ "ಹ್ಹೆ ಹ್ಹೆ ಹ್ಹೆ ಹ್ಹೆ"ಯ ಅರ್ಥ ತಿಳಿಯಲು ತಡವಾಗಲಿಲ್ಲ ಕೆಲವೇ ನಿಮಿಷಗಳಲ್ಲಿ ಶ್ರೀಮತಿ ಐಸನ್ ಹಾರ್ಟ್‌ರವರ ಮಗಳು ತನ್ನ ಜೊತೆ ಗಾತಿಯರೊಡನೆ ಅಲ್ಲಿಗೆ ಬರುವಳಿದ್ದಳು. ಅವರೊಂದಿಗೆ ಚಾಲೂಕಾಗಿ ಮಾತ ನಾಡಲು ಒಬ್ಬ ಅತಿಥಿ ಬೇಕಾಗಿತ್ತು. ನಾನೇ ಅದಕ್ಕೆ ಬಲಿಪಶು !

ಅಂದಿನಿಂದ ಯಾರಾದರು "ಹ್ಹೆ ಹ್ಹೆ ಹ್ಹೆ ಹ್ಹೆ" ಅಂದರೆ "ಏನ್ರಿ ಅದು ಹ್ಹೆ ಹ್ಹೆ ಹ್ಹೆ ಹ್ಹೆ? ಅಂಥ ತಮಾಷೆ ನಡೀತಿರೋದಾದ್ರೂ ಏನು ?" ಅಂತ ನಾನು ಕೇಳುತ್ತಿರಲಿಲ್ಲ. ಬದಲಿಗೆ ಏನೋ ಗ್ರಹಚಾರ ವಕ್ರಿಸಿದೆ. ತಪ್ಪು ಸರಿ ಪಡಿಸಿಕೊಳ್ಳಬೇಕು' ಅಂತ ಅರ್ಥ ಆಗ್ತಾ ಇತ್ತು.

ನಾನು ಪ್ರಿನ್ಸ್ ಟನ್‌ನಲ್ಲಿದ್ದಾಗ ಒಮ್ಮೆ ಒಂದು ಪ್ರಯೋಗ ಮಾಡುವ ಅವಕಾಶ ದೊರಕಿತ್ತು. ಸಮಸ್ಯೆ ಇದು: ಮನೆ ಮುಂದಿನ ಹುಲ್ಲಿನ ಮೇಲೆ ನೀರು ಚುಮುಕಿಸುವ 'S' ಆಕಾರದ 'ಲಾನ್ ಸ್ಪ್ರಿಂಕ್ಲರ್' ನೀವೆಲ್ಲಾ ನೋಡಿ ರುತ್ತೀರಿ. ಇದರಿಂದ ನೀರು ಹೊರಕ್ಕೆ ಚಿಮ್ಮುತ್ತಿರುವಾಗ, ಈ 'S' ಆಕಾರದ ಸೂಸು ಮೂತಿ, ನೀರು ಚಿಮ್ಮುತ್ತಿರುವ ದಿಕ್ಕಿನ ವಿರುದ್ಧ ದಿಕ್ಕಿನಲ್ಲಿ ತಿರುಗುವುದು ಎಲ್ಲರಿಗೂ ತಿಳಿದ ವಿಷಯ. ಪ್ರಶ್ನೆ ಏನಪ್ಪಾ ಅಂದರೆ, ಇದೇ ಸೂಸುಮೂತಿ ನೀರಿನಲ್ಲಿ ಮುಳುಗಿದ್ದು, ಮೂತಿಯು ಕೊಳವೆ ನೀರನ್ನು ಹೀರಲು ಶುರು ಮಾಡಿದರೆ, ಸೂಸು ಮೂತಿ ತಿರುಗುವ ದಿಕ್ಕು ಯಾವುದು ? ಪ್ರಯೋಗ ಮಾಡಿಯೇ ಇದನ್ನು ನಿರ್ಧ ರಿಸಬೇಕು ಎಂದು ತೀರ್ಮಾನಿಸಿದೆ. ಪ್ರಿನ್ಸ್ ಟನ್‌ನಲ್ಲಿನ ನೆಲಮಾಳಿಗೆಯಲ್ಲಿದ್ದ ಸೈಕ್ಲೊ ಟ್ರಾನ್ ರೂಮಿನಲ್ಲಿ ಒಂದು ನೀರು ತುಂಬಿದ ದೈತ್ಯಾಕಾರದ ಗಾಜಿನ ಬುರುಡೆ ಯಿತ್ತು. ಅದರೊಳಗೆ 'S' ಆಕಾರಕ್ಕೆ ಬಗ್ಗಿಸಿದ ತಾಮ್ರದ ಕೊಳವೆಯೊಂದನ್ನು ರಬ್ಬರ್ ನಳಿಗೆಯ ಮೂಲಕ ಇಳಿಬಿಟ್ಟು ಗಾಜಿನ ಬುರುಡೆಯೊಳಗೆ ಒತ್ತಡದ ಗಾಳಿಯನ್ನು ಬಿಟ್ಟರೆ, ಗಾಳಿ ನೀರನ್ನು ಸೂಸು ಮೂತಿಯೊಳಗೆ ನುಗ್ಗಿಸುವಾಗ, ಆ ಸೂಸು ಮೂತಿ ತಿರುಗುವ ದಿಕ್ಕನ್ನು ಪರಿಶೀಲಿಸುವುದು ಪ್ರಯೋಗದ ಉದ್ದೇಶ. ಪ್ರಯೋಗದ ಉಪಕರಣ ಸಿದ್ಧವಾಯಿತು. ಬುರುಡೆಯೊಳಗೆ ಒತ್ತಡದ ಗಾಳಿಯನ್ನು ಬಿಡಲು ದೂರದಲ್ಲಿದ ನಲ್ಲಿಯನ್ನು ತಿರುಗಿಸಿದೆ.

'ಫಠಾರ್' ಎಂಬ ಶಬ್ದವಷ್ಟೇ ನನಗೆ ಕೇಳಿಸಿದ್ದು. ಗಾಳಿಯ ಒತ್ತಡಕ್ಕೆ ಗಾಜಿನ ಬುರುಡೆ ಚೂರು ಚೂರಾಗಿ ಸೈಕ್ಲೋಟ್ರಾನ್ ಕೊಠಡಿಯಲ್ಲೆಲ್ಲಾ ನೀರು ತುಂಬಿತ್ತು. ನಮ್ಮ ಪ್ರೊಫೆಸರ್ ಅಂದು ತಾನೇ ತೆಗೆದಿದ್ದ ಅತಿ ಅಮೂಲ್ಯವಾದ ಕ್ಲೌಡ್ ಛೇಂಬರ್ ಛಾಯಚಿತ್ರ ಹಂಸದಂತೆ ತೇಲುತ್ತಾ ನನ್ನ ಬಳಿ ಬಂತು. ನನ್ನ ಗ್ರಹಚಾರಕ್ಕೆ ಅದೇ ಸಮಯಕ್ಕೆ ನಮ್ಮ ಪ್ರೊಫೆಸರ್ ಪ್ರತ್ಯಕ್ಷ.

"ಇನ್ನು ಮೇಲೆ ನಿನ್ನ ಪ್ರಯೋಗಗಳನ್ನ ವಿದ್ಯಾರ್ಥಿಗಳ ಪ್ರಯೋಗ ಶಾಲೆಯಲ್ಲಿ ಮಾತ್ರ ಮಾಡತಕ್ಕದು" ಎಂದಷ್ಟೆ ಅವರು ಹೇಳಿದ್ದು.

ಅಪರಂಜಿ ಜಾಹೀರಾತು ದರಗಳು

ಪೂರ್ಣ ಪುಟ (Full Page)–	ರೂ. 800/-	ಮೂರು ಸಂಚಿಕೆಗಳಲ್ಲಿ ಸತತ
ಅರ್ಧ ಪುಟ (Half Page)–	ರೂ. 400/-	
ಕಾಲು ಪುಟ (Quarter Page)–	ರೂ. 250/-	

ಜಾಹೀರಾತುಗಳನ್ನು, ಅವುಗಳ ವರ್ಗಕ್ಕೆ ತಕ್ಕ ಚೆಕ್ಕುಗಳೊಡನೆ ಕೆಳಗಿನ ವಿಳಾಸಕ್ಕೆ ಕಳುಹಿಸಿ.

ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರಂ ಬೆಂಗಳೂರು–560 003

ವಿ.ಸೂ:– ಚೆಕ್ಕುಗಳನ್ನು ಅಪರಂಜಿ ಹೆಸರಿಗೆ ನಮೂದಿಸಬಹುದು.


ಮಾಸ್ ಕಾಟ್ ಆಗ್ರೋ ಕೆಮಿಕಲ್ಸ್
ಪ್ರೈವೇಟ್ ಲಿಮಿಟೆಡ್

93, 3ನೇ ಘಟ್ಟ,
ಪೀಣ್ಯ ಇಂಡಸ್ಟ್ರಿಯಲ್ ಏರಿಯಾ,
ಬೆಂಗಳೂರು–560 058.

ದೂರವಾಣಿ : 395902 ತಂತಿ : 'ಮಾಸ್ ಕಾಟ್' ಟೆಲೆಕ್ಸ್ -845-580

ಭತ್ತ, ಕಬ್ಬು ಮತ್ತು ಗೋಧಿಯ ಬೆಳೆಗಳಲ್ಲಿ ಕಳೆ ನಿಯಂತ್ರಣ ಮಾಡುವುದಕ್ಕೆ
''ನಾಕ್ವೀಡ್'' ಕಳೆನಾಶಕವನ್ನು ಉಪಯೋಗಿಸಿರಿ.

ಶುಭಾಶಯಗಳೊಂದಿಗೆ :–



ಎಸ್. ಎಸ್ ಗಿರಿಮಾಜಿ ಅಂಡ್ ಸನ್ಸ್
[ಬೆಂಗಳೂರು]

ನಂ. 46, ಇಂಡಸ್ಟ್ರಿಯಲ್ ಸಬರ್ಬ್
ಯಶವಂತಪುರ, ಬೆಂಗಳೂರು–560 022.

REGISTERED No. BGW-180

ಶುಭಾಶಯಗಳೊಂದಿಗೆ

Printed by V R NATH for the Publisher M SHIVA KUMAR, Published and owned by M SHIVA KUMAR 36, 6th Main Road, Malleswaram Bangalore-560 003 Printed at IMPRESSIONS 404, Sampige Road, Malleswaram, Bangalore-560 003 Editor M SHIVA KUMAR